IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಕನ್ನಡ ಕಥಾ ಸಾಹಿತ್ಯದಲ್ಲಿ ದೇಸಿ ಸಂಸ್ಕೃತಿಯ ಪಲ್ಲಟದ ಚಿತ್ರಣಗಳು: ನವ್ಯೋತ್ತರ ಸಣ್ಣ ಕಥೆಗಳಲ್ಲಿ

**ಡಾ. ಹೇಮಲತ ಬಿ.ಎಸ್.**

ಕನ್ನಡ ಉಪನ್ಯಾಸಕಿ, ಸೆಂಟರ್ ಫಾರ್ ಮ್ಯಾನೇಜ್ ಮೆಂಟ್ ಸ್ಟಡೀಸ್

ಜೈನ್(ಡೀಮ್ಡ್ ಬಿ ಯುನಿವರ್ಸಿಟಿ)

ಧಾರ್ಮಿಕ, ಸಾಮಾಜಿಕ ಜನಜೀವನದ ರೂಢಿಪದ್ಧತಿಗಳನ್ನು, ಸಂಪ್ರದಾಯಗಳನ್ನು ಕುರಿತು ಆಲೋಚಿಸುವ ಮತ್ತು ಕಾರ್ಯರೂಪದಲ್ಲಿ ತರುವಂತಹ ಕ್ರಿಯಾ ಸ್ವರೂಪವೇ ಸಂಸ್ಕೃತಿ. ಸಂಸ್ಕೃತಿ ಜೀವನ ವಿಧಾನ. ಬದುಕಿಗೆ ಸಂಬಂಧಿಸಿದ ಲೌಕಿಕ, ಅಲೌಕಿಕ, ಭೌತಿಕ ಮತ್ತು ಮಾನಸಿಕವಾದ ಎಲ್ಲ ವಸ್ತು-ವಿಷಯವನ್ನು ಒಳಗೊಂಡಿರುವಂತಹದ್ದು.

ಸಂಸ್ಕೃತಿ ಎಂಬ ಪದವನ್ನು ಇಂಗ್ಲೀಷ್‌ನ 'ಅಣಟಣಡಿಜ ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತಿದೆ. ಸಂಸ್ಕೃತಿ ಪದದ ಅರ್ಥವ್ಯಾಪ್ತಿ ಅತ್ಯಂತ ಆಳ ಮತ್ತು ವಿಸ್ತಾರ ಹೊಂದಿದೆ. ಭಾರತೀಯ ದಾರ್ಶನಿಕರ ಪ್ರಕಾರ ಮನುಷ್ಯರ ಅಂತರಂಗದ ಉದ್ಧಾರ ಸಂಸ್ಕೃತಿಯಿಂದ ಮಾತ್ರ ಸಾಧ್ಯ. ಸಂಸ್ಕೃತಿಯಿಂದ ಅಂತರಂಗದ ಮೇಲ್ಮೈಯು ಉತ್ತಮಗೊಂಡು, ಬಹಿರಂಗವಾಗಿ ವ್ಯಕ್ತಿತ್ವವನ್ನು ರೂಪಿಸಲು ಸಹಾಯವಾಗುವುದು. ಉತ್ತಮ ವ್ಯಕ್ತಿಯನ್ನಾಗಿ ನಿರ್ಮಾಣ ಮಾಡುವಲ್ಲಿ ಸಂಸ್ಕೃತಿ ಮುಖ್ಯ ಪಾತ್ರ ವಹಿಸುತ್ತದೆ.

'ಸಂಸ್ಕೃತಿ' ಎಂದರೆ ಮನುಷ್ಯರ ಅನ್ಯೋನ್ಯ ಸಂಬಂಧದಲ್ಲಿ ನಯ, ವಿನಯಗಳ ಸೊಬಗು, ಸ್ವಗುಣ ಪರಗುಣ, ಸಂಮಿಶ್ರಿತ ಕಾಂತಿ ಈ ಸಂಸ್ಕೃತಿ. ಮೂಲದಲ್ಲಿ ನಮ್ಮ ಅಂತರಂಗ ಜೀವನಕ್ಕೆ ಸಂಬಂಧ ಪಟ್ಟದ್ದು. ಅದು ನಮ್ಮ ಒಳ ಸಂಪತ್ತು. ಅದರ ಜ್ಞಾನ ಮನಸ್ಸು ಮತ್ತು ಹೃದಯ. ಅದರಿಂದ ಬೇರೆಯಾದದ್ದು ನಮ್ಮ ಬಹಿರಂಗ ಜೀವನ. ಮನೆ-ವಾಹನ, ಒಡವೆ, ಹಣ ಮೊದಲಾದ ಘನವಸ್ತುಗಳು ಅಂತರಂಗದ ನೆಲೆಯಲ್ಲಿ ಸಂಸ್ಕೃತಿಯನ್ನು ಕಾಣುವ ದೃಷ್ಟಿ ಮತ್ತು ಹಳೆಯ ಆಕೃತಿಗಳ ನಡುವೆ ನೇರ ಸಂಬಂಧವಿದೆ' ಎಂಬುದು ಡಿ.ವಿ.ಜಿ ಅವರ ಅಭಿಪ್ರಾಯವಾಗಿದೆ.

'ಸಂಸ್ಕೃತಿಯೆಂಬುದು ಬರಿಯ ವಿದ್ಯೆಯಲ್ಲ; ವಿದ್ಯಾ ಕುಸುಮದ ಪರಾಗ. ಬರಿಯ ತಿಳಿವಳಿಕೆಯಾಗಲಿ ವಸ್ತು ವಿಜ್ಞಾನವಾಗಲಿ ಸಂಸ್ಕೃತಿಯಲ್ಲ. ಬರಿಯ ಜಾಣತನವೂ ಯುಕ್ತಿಯೂ ಸಂಸ್ಕೃತಿಯಲ್ಲ. ಸಂಗೀತ ಮೊದಲಾದ ಲಲಿತ ಕಲಾಭಿರುಚಿಯೂ ಸಂಸ್ಕೃತಿಯಲ್ಲ. ಸಮ್ಯಕ್ ಕರಣ, ಸಮ್ಯಕ್ ಕೃತಿ – ಸಂಸ್ಕೃತಿ. ನಮ್ಮ ಜೀವನವನ್ನು ಸಾಧುವನ್ನಾಗಿ ಮಾಡಿಕೊಳ್ಳುವ ವಿಧಾನವೇ ಸಂಸ್ಕೃತಿ. ನಡೆನುಡಿಗಳ ಚೊಕ್ಕಟವೇ ಸಂಸ್ಕೃತಿ. ಔಚಿತ್ಯ ಪ್ರಜ್ಞೆ, ಯುಕ್ತಾ ಯುಕ್ತ ವಿವೇಚನೆ, ಪರೇಂಗಿತ ಪರಿಜ್ಞಾನ, ಸರಸತಾಭಿರುಚಿ, ಧರ್ಮ ಚಿಂತನೆ, ಆತ್ಮಶೋಧನೆ, ಆತ್ಮಸಂಯಮಗಳು ಸಂಸ್ಕೃತಿಯ ಪ್ರಧಾನಾಂಶಗಳು. ಸತ್ಯನಿಷ್ಠೆ, ನಯಗಾರಿಕೆ ಸಂಸ್ಕೃತಿಯ ಲಕ್ಷಣಗಳು. ಆತ್ಮ ವಸ್ತುವಿನ ಪರಮೋತ್ಕೃಷ್ಟತೆಯೇ ಅದರ ತಿರುಳು. ಅದೊಂದು ವಿಶ್ವ ಪ್ರಯುಕ್ತವಾದ ಆತ್ಮ ಎಂದು ಡಿವಿಜಿ ಸಂಸ್ಕೃತಿಯ ಸಾರಾಂಶವನ್ನು

ವಿಶದಪಡಿಸಿರುವರು.

'ಕಳಬೇಡ, ಕೊಲಬೇಡ, ಹುಸಿಯನುಡಿಯಲು ಬೇಡ; ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ; ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ' ಎಂಬ ಬಸವಣ್ಣನವರ ವಚನದಲ್ಲಿ ಸಂಸ್ಕೃತಿಯ ಸ್ವೂರೂಪ ಲಕ್ಷಣಗಳನ್ನು ಗುರುತಿಸಬಹುದಾಗಿದೆ'[೩] ಎಂದು ದೇಜಗೌ ಅವರು ತಮ್ಮ 'ಕನ್ನಡ ಸಂಸ್ಕೃತಿ' ಕೃತಿಯಲ್ಲಿ ತಿಳಿಸಿದ್ದಾರೆ.

'ಸಮಾಜದ ಒಬ್ಬ ಸದಸ್ಯನಾಗಿ ಮನುಷ್ಯನು ಗಳಿಸಿ ಕೊಂಡ ಜ್ಞಾನ, ನಂಬಿಕೆ, ಕಲೆ, ನೀತಿ, ನಿಯಮ, ಆಚರಣೆ, ಸ್ವಭಾವ ಮತ್ತು ಯಾವುದೇ ಶಕ್ತಿ ಸ್ಥಿತಿಯನ್ನು ಒಳಗೊಳ್ಳುವ ಒಂದು ಸಂಕೀರ್ಣವೇ ಸಂಸ್ಕೃತಿ'[೪] ಎಂದಿದ್ದಾರೆ 'ಟೈಲರ್'. 'ಒಂದು ನಿರ್ದಿಷ್ಟ ಸಮಾಜದ ಸದಸ್ಯರು ಹಂಚಿಕೊಳ್ಳುವ ಹಾಗೂ ಪ್ರಸಾರ ಮಾಡುವ ಜ್ಞಾನ, ದೃಷ್ಟಿಕೋನ ಮತ್ತು ಸ್ವಾಭಾವಿಕ ನಡವಳಿಕೆಯು ನಮೂನೆಗಳ ಒಟ್ಟು ಮೊತ್ತವೇ ಸಂಸ್ಕೃತಿ'[೫] ಎಂದು ತಿಳಿದವರು ಲಿಂಟನ್. ಮಾಥ್ಯು ಅರ್ನಾಲ್ಡ್ ಪ್ರಕಾರ 'ಸಂಸ್ಕೃತಿ ಎಂದರೆ ಸುಗುಣ ಸಾಮರಸ್ಯ'[೬]. "'ಕ್ಲೂಹಾನ್‌ನ ಪ್ರಕಾರ' ಜೀವನವನ್ನು ನಡೆಸಲು ಕಾಲಾನುಕ್ರಮವಾಗಿ ರೂಪುಗೊಂಡ ಒಂದು ಜೀವನ ವಿನ್ಯಾಸವಾಗಿದೆ ಸಂಸ್ಕೃತಿ" .[೭]

ಒಟ್ಟಾರೆ ಅನೇಕ ಮಾನವ ಶಾಸ್ತ್ರಜ್ಞರು 'ಒಟ್ಟು ಜೀವನ ವಿಧಾನವನ್ನು ಸಂಸ್ಕೃತಿ' ಎಂದು ಪರಿಭಾವಿಸಿದ್ದಾರೆ. ಸಂಸ್ಕೃತಿ ಮಾನವನ ಸ್ವಭಾವ, ವ್ಯಕ್ತಿತ್ವ ವಿಕಸನದ ನೆಲೆ ಮಾತ್ರವಲ್ಲ, ಶುದ್ಧೀಕರಣದ ಪ್ರಕ್ರಿಯೆ ಆಂತರ್ಯ ಮತ್ತು ಬಾಹ್ಯತ್ವದ ಅಂಶಗಳನ್ನು ಒಳಗೊಂಡಿದೆ. ಸಂಸ್ಕೃತಿಯ ಪ್ರಸರಣ ಕ್ರಿಯೆಯಿರುವುದು ವ್ಯಕ್ತಿ–ಕುಟುಂಬ–ಸಮುದಾಯ–ಸಮಾಜ ನಿರ್ಮಾಣದಲ್ಲಿ, ಹಾಗಾಗಿ ಮನುಷ್ಯ ಮತ್ತು ಸಮಾಜ, ಸಮಾಜ ಮತ್ತು ಸಂಸ್ಕೃತಿ ಒಂದು ಮತ್ತೊಂದಕ್ಕೆ ಪೂರಕವಾಗಿದೆ, ಪೋಷಕವಾಗಿದೆ.

ಸಂಸ್ಕೃತಿಯು ತನ್ನ ಮೂಲ ಸ್ವರೂಪವನ್ನು ಯಥಾವತ್ತಾಗಿ, ಪರಂಪರಾಗನುಗತವಾಗಿ ಹೊಂದಿರುವುದು ಎಂದು ಹೇಳಲಾಗುವುದಿಲ್ಲ. ಕಾರಣ, ಸಂಸ್ಕೃತಿಯು ಚಲನಶೀಲತೆ ಗುಣವುಳ್ಳದ್ದು, ಕಾಲಧರ್ಮ, ಮನೋಧರ್ಮ ಕಾಲಾನುಗತಿಯಲ್ಲಿ ಅನ್ಯ ಪ್ರಭಾವ ಪ್ರೇರಣೆಯಿಂದ ಬದಲಾವಣೆಗೆ ಒಳಪಡುವುದು. ಆದಕಾರಣ, ಸಂಸ್ಕೃತಿಯ ಅರ್ಥ ವಿನ್ಯಾಸ ಸಂಕೀರ್ಣವಾಗುತ್ತಾ ಹೋಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಧಾನ ಸಂಸ್ಕೃತಿ ಮತ್ತು ಉಪಸಂಸ್ಕೃತಿ ರೂಪುಗೊಂಡು ವೈಚಾರಿಕ ನೆಲೆಗೆ ಅನುವು ಮಾಡಿತು. ಸಂಸ್ಕೃತಿಯ ಗುಣ ಕ್ರಿಯಾತ್ಮಕವಾಗಿ ಸಂಚಾರಿತನ. ಕಾಲಕ್ಕೆ ಅನುಗುಣವಾಗಿ, ಅನುಸಾರವಾಗಿ ಪ್ರಭಾವ ಪ್ರೇರಣೆಗಳಿಗೆ ಒಳಪಟ್ಟು ಅನುಕರಣಾತ್ಮಕವಾಗಿ ಸಾಗುವಾಗ ಮಾನವನ ಜೀವನವು ಅದರೊಟ್ಟಿಗೆ ಚಲಿಸುವುದು ಸಹಜ ಪ್ರಕ್ರಿಯೆಯಾಗಿದೆ.

ವಸಾಹತೋತ್ತರ ಅನುಭವವನ್ನು ಕನ್ನಡ ಸಾಹಿತ್ಯ ಚಿಂತನೆಯ ಮಟ್ಟಿಗೆ ಹೇಳುವುದಾದರೆ 'ಸಂಪೂರ್ಣ ದಿಗ್ವಿಜಯ' ಮತ್ತು 'ನಿಯಂತ್ರಣ' ಎಂಬ ಪರಿಕಲ್ಪನೆಗಳನ್ನು ಬಳಸಿಕೊಳ್ಳುತ್ತೇವೆ. ಈ ಪರಿಕಲ್ಪನೆಗಳನ್ನು ಮೂರು ರೀತಿಯಲ್ಲಿ ಡಿ.ಆರ್. ನಾಗರಾಜ್ ಅವರು ತಮ್ಮ ಸಾಹಿತ್ಯ ಕಥನ ಕೃತಿಯಲ್ಲಿ ಗುರುತಿಸಿದ್ದಾರೆ. ಅವು ೧. ಸಾಂಸ್ಕೃತಿಕ ಆತ್ಮವಾದ, ೨. ಸಮಗ್ರ ದಿಗ್ವಿಜಯವಾದ ೩. ಸಾಂಸ್ಕೃತಿಕ ಅನುಸಂಧಾನ ಮಾರ್ಗ ಎಂದು ಸಾಂಸ್ಕೃತಿಕ ಆತ್ಮವಾದ–ಪೌರ್ವಾತ್ಯ ಸಮಾಜಗಳಿಗೆ ವಿಶಿಷ್ಟವಾದ ಸಾಂಸ್ಕೃತಿಕ ಆತ್ಮವಿದೆ. ಅದು ಪಶ್ಚಿಮಕ್ಕಿಂತ ಘನ ಮತ್ತು ಪವಿತ್ರ, ಇದು ಪೌರ್ವಾತ್ಯ ಕಲೆಗಳಲ್ಲಿ ಸ್ಫುಟವಾಗಿ ವ್ಯಕ್ತವಾಗಿದೆ ಎಂದು ಭಾವಿಸುತ್ತದೆ. ರಾಷ್ಟ್ರೀಯ ಸಮಾಜಗಳನ್ನು ಮೀರಿ ಭೌಗೋಳಿಕ, ಸಾಂಸ್ಕೃತಿಕ ನಾಗರೀಕತೆಯ ಚೌಕಟ್ಟನ್ನು ನಿರ್ಮಿಸಿಕೊಳ್ಳುವುದು ಸಾಂಸ್ಕೃತಿಕ ಆತ್ಮವಾದದ ಮುಖ್ಯ ಲಕ್ಷಣವಾಗಿರುತ್ತದೆ .[೮]

ಒಂದು ಪ್ರದೇಶದಲ್ಲಿ ನಿರ್ದಿಷ್ಟ ಜನಾಂಗವು ವಾಸವಾಗಿದ್ದು, ಜೀವನದಲ್ಲಿ ಅಳವಡಿಸಿಕೊಂಡಿರುವ ಆಚಾರ ವಿಚಾರ ವಿಧಿ ಪದ್ಧತಿಗಳನ್ನು ರೂಢಿಸಿ ಜೀವನ ಸಾಗಿಸುತ್ತಿರುವ ಬದುಕಿನ ವಿನ್ಯಾಸವನ್ನು ಮತ್ತು ನಿರ್ದಿಷ್ಟ ಜನಾಂಗ, ನಿರ್ದಿಷ್ಟ ಪ್ರದೇಶದಲ್ಲಿ ವಾಸವಾಗಿದ್ದು ಅಸ್ತಿತ್ವವನ್ನು ಕಂಡು ಕೊಂಡ ಬಗೆಯನ್ನು 'ಪ್ರಾದೇಶಿಕತೆ'[೯] ಎಂದು ಹೇಳಬಹುದು.

ಯಾವುದು ಆಧುನಿಕ? ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟ. ಕಾಲದ ನೆಲೆಯಿಂದ ಆಲೋಚಿಸಿದರೆ ಇದ್ದ-ಇರುವ-ಇರಬಹುದಾದ ಎಂದಾಗಿ ವಿಂಗಡಿಸಿಕೊಂಡಾಗ ಮನಸ್ಸಿನ ಆಲೋಚನೆಗಳು ಕ್ಷಣದಿಂದ ಕ್ಷಣಕ್ಕೆ ವಿವಿಧ ರೀತಿಯಲ್ಲಿ ಯೋಚಿಸುತ್ತದೆ. ವಾಸ್ತವತೆಯ ಸಂದರ್ಭಕ್ಕೆ ಸ್ಪಂದಿಸುತ್ತ ನಿರ್ಣಯ, ತೀರ್ಮಾನ ತೆಗೆದುಕೊಳ್ಳುವುದು. ಕಾರ್ಯ ವಿಧಿಯು ಕೆಳವರ್ಗ, ಕಾರ್ಮಿಕರು, ದುಡಿಯುವ ವರ್ಗ ಒಂದಾದರೆ ಮಧ್ಯಮ ವರ್ಗದವರೂ ಕೂಡ ಸ್ವಲ್ಪ ಭಿನ್ನವಾಗಿ ಯೋಚಿಸುವುದು. ಆದರೆ ಮನುಷ್ಯನ ಊಟ-ನಿದ್ದೆ, ದುಡಿಮೆ, ಬದುಕು, ಹೋರಾಟ, ಆಸೆ, ಆಶೋತ್ತರಗಳು ದೇವರು ಧರ್ಮ, ಆಚರಣೆ ಹೀಗೆ ಅನೇಕಾಂಶಗಳು ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಈ ಬಗೆಯ ದೈನಂದಿನ ಜೀವನ ಗತಿಯೇ ಸಂಸ್ಕೃತಿಗೆ ಕಾರಣವಾಗಿ ದಾಖಲುಗೊಳ್ಳುತ್ತ ಸಂಪ್ರದಾಯ ಪರಂಪರೆಗೆ ಕಾರಣವಾಗುವುದು.

'ಬದುಕು ಮೌಲ್ಯ ಆಧಾರಿತವಾದದ್ದು' ಎಂಬ ಉಕ್ತಿಯನ್ನು ಕುರಿತು ಆಲೋಚಿಸಿದರೆ ಕತೆಗಳಲ್ಲಿ ಮೌಲ್ಯವನ್ನು ತಿರಸ್ಕರಿಸಿದ, ಧಿಕ್ಕರಿಸಿದ ಅಥವಾ ನಿರ್ಲಕ್ಷಿಸಿದ ಭಾವ ಚಿಂತನೆಗಳು ಸಾಧ್ಯವಿಲ್ಲ. ಮತ್ತು ಮಾನವನ ಬದುಕು-ಜೀವನ ಇರುವುದು ಮೌಲ್ಯಗಳ ಮೇಲೆ ಅದನ್ನು ಮೀ'ರಲು ಸಾಧ್ಯವಿಲ್ಲ, ಮೀರಿದ್ದೇ ಆದಲ್ಲಿ ಬದುಕು ದುರಂತರ ಅಥವಾ ಅತಂತ್ರದ ಸ್ಥಿತಿ ಅದು ಸಾಮಾಜಿಕ ಜೀವನವೇ ಅಲ್ಲ ಎಂಬ ನಿಲುವು ಕಥೆಗಳಲ್ಲಿ ಕಂಡುಬರುವುದು.ಒಂದು ಸಂಪ್ರದಾಯ ನಿರಂತರವಾಗಿ ಜೀವಂತವಾಗಿರಬೇಕೆಂದರೆ, ಮೌಲ್ಯಗಳೇ ಕಾರಣ ಹೀಗಾಗಿ ಮೌಲ್ಯಾಧಾರಿತ ಬದುಕು ಶ್ರೇಷ್ಠ, ಅದೇ ಸತ್ಯ ಎಂಬ ಬದುಕಿನ ದರ್ಶನವನ್ನು ಬಿಂಬಿಸುತ್ತವೆ. ಇದಕ್ಕೆ ಪೋಷಕವಾಗುವಂತೆ ನಾ. ಡಿಸ ೇಜ 'ಬಾಂದೇ ಹಳ್ಳದ ಶಿಲುಮೆ ಮನೆ' ಕಥೆಯಲ್ಲಿ ಕಥಾ ನಾಯಕನ ಎರಡು ಅಂಶಗಳಲ್ಲಿ ನಂಬಿಕೆಯಿರಿಸಿಕೊಂಡಿದ್ದು ಒಂದು ಮಾನವೀಯತೆ ಎಂಬ ಮೌಲ್ಯ, ಎರಡನೆಯದು ಮತ-ಧರ್ಮ-ಆಚರಣೆ-ದೇವರು ಬಗ್ಗೆ ಇರಿಸಿದ್ಧ ಅಚಲ-ಶ್ರೇಷ್ಠ ನಂಬಿಕೆ. ವಯೋವೃದ್ಧರ ಮನಸ್ಸನ್ನು ನೋಯಿಸಲಾರದೆ ಅವರು ಬದುಕಿರುವಷ್ಟು ದಿನ ಆ ಮನೆಯಲ್ಲಿರುವಂತೆ ನೋಡಿಕೊಂಡದ್ದು, ಅನಂತರ ಆ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಿಕೊಂಡದ್ದು ಇಲ್ಲಿ ಮನುಷ್ಯ ಧರ್ಮದ ಪ್ರತಿಪಾದನೆಯಾದರೆ; ಕ್ರಿಸ್ತನ ಸಂಕೇತವಾದ ಶಿಲುಬೆಯನ್ನು ಏರಿಸಿ ಶಾಶ್ವತ ಪೂಜೆ ಸಲ್ಲಿಸುವಂತೆ ನಡೆಸಿಕೊಂಡ ಕೈಂಕರ್ಯ, ನಡುವೆ ಊರುಬಿಟ್ಟು ಹೋಗಬೇಕಾದ ಪ್ರಸಂಗ, ಆದರೆ ದೇವರೇ ಕಾಪಾಡಿದ, ಮೂರನೆಯ ಮಗ ಮರಳಿ ಊರಿಗೆ ಬಂದದ್ದು ತಂದೆಯಂತೆ ಮುಂದುವರಿಸಿದ ಪ್ರಕ್ರಿಯೆ-ವಂಶವಾಹಿನಿಯ ಕ್ರಿಯೆಯಲ್ಲಿ ತೋಟ-ಮನೆ-ಶಿಲುಬೆಯ ಪೂಜೆ ಇವು ನಿರಂತರವಾಗಿ ನಡೆಯುತ್ತದೆ ಎಂಬ ಸ್ಥಿತಿಗೆ ತಲುಪಿದ ಕಥಾನಾಯಕನಿಗೆ ಬದುಕಿನ ಸಾರ್ಥಕ್ಯತೆಯ

ಅನುಭವವುಂಟಾಗುವುದು. ಮನುಷ್ಯನಾಗಿ ಹುಟ್ಟಿದ್ದು, ಇಷ್ಟು ಕೆಲಸ ಮಾಡಲು ಸಾಧ್ಯವಾಯಿತು ಎಂಬ ಸಮಾಧಾನದ ಚಿತ್ತ ಸ್ಥಿತಿವುಂಟಾಗುವುದು. 'ನಂಬಿಕೆ' ಎಂಬ ಮೌಲ್ಯವು ಮಾನವನನ್ನು ನಡೆಸುತ್ತದೆ, ಗುರಿಯನ್ನು ಮುಟ್ಟಿಸುತ್ತದೆ ಎಂಬ ತತ್ತ್ವವು ವ್ಯಕ್ತಗೊಂಡಿದೆ.

ಸ್ಪರ್ಧಾ ಪ್ರಪಂಚದಲ್ಲಿ, ಗಳಿಕೆಯ ಓಟದ ಹಂಬಲ ವರ್ಗ, ವರ್ಣ, ವಯೋಮಾನ ಯಾವುದೇ ಬೇಧವಿಲ್ಲದೆ ಸಾಗಿದೆ. ನಗರದ ಆಕರ್ಷಣೆಗೆ ಬೆರಗಾಗಿ, ತನ್ನದೇ ಸ್ವಂತ ಬದುಕನ್ನು ರೂಪಿಸಿಕೊಳ್ಳುವಲ್ಲಿ ಯಾವುದೇ ಭಾವನಾತ್ಮಕವಾದ ಒತ್ತಡಕ್ಕೂ ಒಳಗಾಗದೆ ತನ್ನ ಕಾಮನೆಗಳನ್ನು ಪೂರೈಸಿಕೊಳ್ಳುವ ವಾಸ್ತವ ಬದುಕಿನ ಕಡೆ ಗಮನ ಹರಿಸುವ ಮಗಳು, ದುಡಿದೇ ಗಳಿಸುವ ತಂದೆ-ತಾಯಿಗಳು ಮಕ್ಕಳಿಂದ ಅನುಭವಿಸುವ ಅವಮಾನ, ಅನರ್ಥ, ಮಾನಸಿಕ ಹಿಂಸೆ, ಬದುಕಿಗಾಗಿ ನಡೆಸುವ ಹೋರಾಟ, ವೃದ್ಧ 'ನಾನ' ನಗರದಲ್ಲಿ ವಾಸಿಸುವ ಮಗನ ಆರ್ಥಿಕ ಸಹಾಯಕ್ಕಾಗಿ ಇದ್ದ ತುಂಡು ಭೂಮಿ

ಮನೆ ಮಾರಿ ಮಂಚವೇ ಮನೆಯಾಗಿ ಪಲ್ಲಟಗೊಂಡ ರೀತಿ, ಎಸ್.ಎಸ್.ಎಲ್.ಸಿ ಓದುವ ಹುಡುಗ ತನ್ನ ಕನಸುಗಳನ್ನು ಪೂರೈಸಿ ಕೊಳ್ಳಲು ಆರಂಭಿಸುವ ದೀಪದ ಬುಟ್ಟಿಯ ಸಣ್ಣ ಕಸುಬಿನ ಬಗೆಗೆ ಬೃಹತ್ ಉದ್ದಿಮೆಯ ಕನಸು ಕಟ್ಟುವುದು. ವ್ಯವಹಾರವನ್ನು ಅಚ್ಚುಕಟ್ಟಾಗಿ ನಿಬಾಯಿಸಲು ಕ್ರಮಬದ್ಧವಾಗಿ ಬರೆದಿಡುವುದು ಮಾಡಿದರೆ ಪ್ರಕಾಶನ ತಂದೆ-ತಾಯಿ ಮಗನು ವ್ಯವಹಾರದಿಂದ ಯಾವ ತೊಂದರೆಗೆ ಇಡಾಗುವನೋ? ಎಂದು ಆತಂಕಕ್ಕೆ ಒಳಗಾಗುವುದು, ತಮ್ಮ ದುಡಿಮೆಯಲ್ಲಿ ಮಗ ಉತ್ತಮವಾಗಿ ಓದಿ ಒಳ್ಳೆ ಕೆಲಸಕ್ಕೆ ಸೇರಿದರೆ ಸಾಕು ಎಂಬ ಹಂಬಲ, ತಾತ ಮೊಮ್ಮಗನ ಕನಸನ್ನು ಅರ್ಥೈಸಿಕೊಂಡಿದ್ದರೂ ಮಗ-ಸೊಸೆಗೆ ತಿಳಿಸಲಾಗದ ಸ್ಥಿತಿ-ಗತಿ ಎಲ್ಲವು ಒಂದಾದರೆ, ಮಗಳು ಓದನ್ನು ಮುಂದುವರಿಸದೆ, ಕೆಲಸವನ್ನು ಮಾಡದೆ, ಮನೆಮಂದಿಯ ಅರಿವಿಗೆ ಬಾರದಂತೆ, ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಂಡು ಮನೆಯವರನ್ನು ತೊರೆದು ತನ್ನ ಬದುಕು ಕಟ್ಟಿಕೊಳ್ಳುವುದು, ದುಡಿದು

ಬದುಕುವ, ಮಗಳ ಬಗೆಗೆ ಕನಸು ಕಟ್ಟಿದ್ದ ತಂದೆ-ತಾಯಿಗೆ ಅವಮಾನವಾಗುವುದು. ಆದರೆ ಇದ್ಯಾವುದರ ಪರಿವೇ ಇರದ ಆಕೆಗೆ ಅವಳ ಬದುಕೇ ಮುಖ್ಯವಾಗುವುದು. ಅಚಾತುರ್ಯದಿಂದ ಪೊಲೀಸರು ಮಗನನ್ನು ಠಾಣೆಗೆ ಕರೆದೊಯ್ಯಲು, ಅವಮಾನಿತ ಪ್ರಕಾಶ ಮನೆಗೆ ಮರಳಿ ಬಾರದೆ ಹೋಗುವುದು ತನ್ನ ಅಸ್ತಿತ್ವದ ಉಳಿವಿಗಾಗಿ, ಏಳಿಗೆಗಾಗಿ ಯಾರಿಗೂ ಸಿಗದಂತೆ ಹೋದನೆ? ಕುಟುಂಬದವರ ಸಂಬಂಧವನ್ನು ನಿರಾಕರಿಸಿದ್ದು, ಕುಟುಂಬ ತ್ಯಜಿಸಿದ್ದು ಏಕೆ? ಎಂಬ ಪ್ರಶ್ನೆ, ಪ್ರಶ್ನೆಯಾಗಿಯೇ ಉಳಿಯುವುದು ಜಯಂತ್ ಕಾಯ್ಕಿಣಿ ಅವರ 'ಪ್ರಕಾಶ ವರ್ಷ' ಕಥೆಯಲ್ಲಿ.

ಪ್ರತಿಮಾತ್ಮಕ ವಿಧಾನದಲ್ಲಿ ಜಯಂತ್ ಕಾಯ್ಕಿಣಿ ಅವರ 'ಸಂತೆಯ ದಿನ' ಕತೆ ರಚನೆಯಾಗಿದೆ. ಮಾನವೀಯ ಮೌಲ್ಯಗಳು ಮಾನವ ಸಮಾಜದ ಬಾಂಧವ್ಯಗಳಲ್ಲಿ ಮುಖ್ಯ ಎಂಬ ಮೂಲ ಅಂಶವನ್ನು ಕತೆಯಲ್ಲಿ ಗುರುತಿಸಬಹುದು. 'ಸಂತೆ' ಎಂಬ ಪದ ದೇಸೀ ವ್ಯಾಪಾರ-ವ್ಯವಹಾರವನ್ನು ಅರ್ಥೈಸುವುದು. ದೇಸೀಯತೆ ನಮ್ಮ ತನವನ್ನು, ಮಾನವನ ಮೂಲಗುಣ ಮಾನವೀಯತೆಯನ್ನು ಗುರುತಿಸುವುದು. ಆರ್ಥಿಕ ವ್ಯವಹಾರಕ್ಕಿಂತ ಮಾನವನ ಅಥವಾ ವ್ಯಕ್ತಿ ವ್ಯಕ್ತಿಯ ನಡುವಿನ ಭಾವನೆಗಳ ವಿನಿಮಯದ ವ್ಯವಹಾರದಲ್ಲಿ ದಯೆ, ಕರುಣೆ, ದಾನ, ಧರ್ಮ ಮುಖ್ಯ ಎಂಬುದನ್ನು 'ಸಂತೆಯ ದಿನ' ಕತೆಯಲ್ಲಿ ಗುರುತಿಸಬಹುದು.

ದೇಶಿಯ ಮಾರುಕಟ್ಟೆ ಮತ್ತು ವಿಶ್ವ ಮಾರುಕಟ್ಟೆಗಳ ಸಂಬಂಧಗಳಲ್ಲಿ ದೇಶಿಯತೆ ಕಾಲದಿಂದ ಕಾಲಕ್ಕೆ ಇಳಿಮುಖವಾಗಿ ನಾಶವಾಗುವಂತಹ ಸ್ಥಿತಿಗೆ ತಲುಪುವುದು ವಿಶ್ವ ಮಾರುಕಟ್ಟೆಯು ದೇಶಿಯತೆಯನ್ನು ಕಬಳಿಸುತ್ತದೆ.

'ಸಂತೆ' ಎನ್ನುವುದು ಕೇವಲ ವ್ಯಾಪಾರ-ವಿನಿಮಯ ಕೇಂದ್ರವಲ್ಲ ಮನುಷ್ಯ ಸಂಬಂಧಗಳ ಸಂಪರ್ಕಗಳ ಭಾವನಾತ್ಮಕ ಸಂವೇದಗಳಿಂದ ಕೂಡಿದ ಬದುಕು ಎಂಬ ವ್ಯವಹಾರಗಳಿಂದ ಕೂಡಿದೆ. ಆದರೆ ಕರಣ ಸಂಹಿತೆಗಳ ನೆಲೆಯಿಂದ ಎಲ್ಲವೂ ವ್ಯವಹಾರವೇ ಎಲ್ಲಕ್ಕೂ ಹಣವೇ ಪ್ರಧಾನ ಮುಖ್ಯ. ಹೀಗಾಗಿ ಆರ್ಥಿಕ ಬಂಡವಾಳ ಜಗತ್ತಿನಲ್ಲಿ ದೇಶಿಯ ಸಂಸ್ಕೃತಿಯು ತಲ್ಲಣಕ್ಕೆ ಗುರಿಯಾಗಿ ನಿಧಾನವಾಗಿ ಅಸ್ತಿತ್ವವನ್ನು ಕಳೆದುಕೊಳ್ಳುತ್ತೆ. 'ಸಂತೆ' ಎಂಬ ದೇಶಿ ಪದವೂ ಭಾಷಾಕೋಶದಿಂದ ಮಾಯವಾಗಲೂಬಹುದು. ವ್ಯಾಪಾರೀಕರಣವು ಕೇವಲ ಪದಾರ್ಥ ಜಗತ್ತಿಗೆ ಮೀಸಲು ಅಲ್ಲ ಬದುಕಿನೊಂದಿಗೆ ಮಿಳಿತಗೊಂಡು ಬದುಕು ಕೂಡ ವ್ಯಾಪಾರ-ವಿನಿಮಯ ಕೇಂದ್ರವಾಗಿ ರೂಪಾಂತರಗೊಳ್ಳುತ್ತದೆ. ಕರಣ ಸಂಹಿತೆಗಳು ಆರ್ಥಿಕ ವಲೆಯದಿಂದ ಮನುಷ್ಯನ ಬದುಕಿನೊಂದಿಗೆ ಮಿಳಿತಗೊಂಡಿದ್ದು, ಪರಿವರ್ತಿತ ಸಾಮಾಜಿಕ ಸ್ಥಿತ್ಯಂತರದ ಸ್ವರೂಪವನ್ನು ಗುರುತಿಸಬಹುದಾಗಿದೆ.

ಅಮರೇಶ ನುಗಡೋಣಿ ಅವರ 'ಸವಾರಿ' ಕಥಾ ಸಂಕಲನದಿಂದ ಆಯ್ಕೆ ಮಾಡಿಕೊಂಡಿರುವ ಕಥೆಗಳು 'ಪರಿಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು' ಮತ್ತು 'ಏ ದಿಲ್ ಮಾಂಗೇ ಮೋರ್'. ಈ ಎರಡೂ ಕಥಾನಕಗಳ ವಸ್ತು ಸಾಮಾನ್ಯ, ಸಾಮಾಜಿಕವಾದದ್ದು. ಅಂದರೆ ಭೂಮಿ-ಕೃಷಿ ಜಗತ್ತು, ಮಾನವ ಸಂಬಂಧ, ಶಿಕ್ಷಣದ ಪ್ರಗತಿ ಪರಿಣಾಮಗಳ ವಿವಿಧ ಸ್ವರೂಪ, ವಾಸ್ತವತಾವಾದದ ಚಿಂತನೆಗಳು ಅಭಿವ್ಯಕ್ತಿಗೊಂಡಿರುವುದು.

ಕಥಾನಾಯಕನಾದ ಶರಬನನಾಯಕ ಒಬ್ಬ ದುರಂತ ನಾಯಕನಾಗಿ ಚಿತ್ರಿತಗೊಂಡಿದ್ದಾನೆ. ಪಿತ್ರಾಜಿತ, ಸ್ವಯಾರ್ಜಿತ, ಭೂಮಿ. ಭೂ ಒಕ್ಕಲಿಗರೊಂದಿಗೆ ಜೀವನ ನಡೆಸುತ್ತಿದ್ದ ಚಿಕ್ಕ ಕುಟುಂಬವಾದರೂ ಶಿಕ್ಷಣ ಬೇಕೆಂದು ಮಕ್ಕಳನ್ನು ಓದಿಸಿದ್ದು ದೊಡ್ಡ ಸ್ಥಾನವನ್ನು ಪಡೆದಿದ್ದು, ಮಾತ್ರವಲ್ಲ ಅಮೇರಿಕಾ ದೇಶಕ್ಕೆ ವಲಸೆ ಹೋಗಿ ಬದುಕ ನಡೆಸುತ್ತಿದ್ದು, ಕಥಾನಾಯಕ ಒಂಟಿಯಾಗಿ ಕೆಲಸಗಾರರೊಂದಿಗೆ ಭೂಮಿಯನ್ನು ಕಾಯುತ್ತ ಮಕ್ಕಳು, ಭೂಮಿಯನ್ನು ನೋಡಿಕೊಳ್ಳುವರು ಎಂದಾಗಿ 'ಕನಸು' ಕಾಣುತ್ತ ಉಳಿಸಿಕೊಳ್ಳುವ ಯಾವುದೋ ದೂರದ ಆಶೆಯಿಂದ ಹಳ್ಳಿಯಲ್ಲಿಯೇ ಉಳಿದುಕೊಂಡದ್ದು; ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡದ್ದು, ಭೂ ಹಂಚುವುದಕ್ಕೆ ಸಿದ್ಧರಾಗಿದ್ದರೂ ಯಾರು ಭೂಮಿ ಪಡೆಯಲು ಸಿದ್ಧರಿಲ್ಲ, ನಗರದಲ್ಲಿ ಕೆಲಸ ಬೇಕೆಂದು ಕೇಳಿಕೊಳ್ಳವರೆ ಹೊರೆತು ಭೂಮಿಯ ಕೃಷಿ ಮಾಡುವ ಅಭಿಲಾಷೆ ತೋರಿಸಲಿಲ್ಲ ಅಂದರೆ 'ಕೃಷಿ'ಗೆ ಸಾವು ಒದಗಿಬಂತೇ? ಈ ಪಾಶ್ಚಾತೀಕರಣದ ಅನುಕರಣೆಯಿಂದ ಮುಂದೆ ಕೃಷಿ ಹೋದರೆ ಬದುಕು ಎಲ್ಲಿಯದು? ಭೂಮಿಯಿಂದ ಬೆಳೆ, ಬೆಳೆಯಿಂದ ಬದುಕು, ಬೆಳೆ ಇಲ್ಲದಿದ್ದರೆ ಎಂತಹ ದುರಂತ?.

ಯಾವುದೇ ಕಾಲವಾಗಬಹುದು ಸಮಸ್ಯೆ ಸಮಸ್ಯೆಯೇ! ಭೂ ಚಳುವಳಿ, ಸರ್ವೋದಯ ತತ್ವ ಭೂ ಹಿಡುವಳಿ, ಉಳುವವನೇ ಒಡೆಯ ಈಗ ಮೂರನೇ ಅಂತಹ ಭೂಮಿ ಇದ್ದರೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರುವುದು, ಒತ್ತುವರಿಯಾಗುವುದು, ಕಬಳಿಕೆಯಾಗುವುದು ಕೃಷಿಯೇತರ ಕಾರ್ಯನಿರ್ವಹಣೆಯಾಗುವುದು.

ಭಾರತೀಯ ಸಂಸ್ಕೃತಿ ಎಂದರೆ, ಕೃಷಿ ಪ್ರಧಾನ ದೇಶ ಕೃಷಿಯೇ ಆಗದಿದ್ದರೆ?! ಮುಂಬರುವ ದುರಂತದ ಅರಿವಿಲ್ಲದೆ, ತಕ್ಷಣದ ಪ್ರಗತಿಯ ಅಭಿವೃದ್ಧಿಯತ್ತ ಎಂಬ ಮಂತ್ರ ಜಪಿಸುತ್ತ, ಭೂ ಕೃಷಿಯನ್ನೇ ಮರೆತು, ಕೇವಲ ಉದ್ಯೋಗಿಯಾಗಿ ಜೀವನ ನಡೆಸುತ್ತ ಸಾಗುತ್ತಿರುವ ಸಮಾಜ ಯಾವ ಪ್ರಗತಿಪರದ ಚಿಂತನೆಗಳಲ್ಲಿರಬಹುದು. ತಂತ್ರಜ್ಞಾನ, ಮಾಹಿತಿಜ್ಞಾನ, ಶಿಕ್ಷಣ ಕ್ರಾಂತಿಯಿಂದ ಸಮಾಜದ ಮೇಲೆ ಆಗುತ್ತಿರುವ ಪರಿಣಾಮ ಒಂದಾದರೆ ವ್ಯಕ್ತಿ–ಸಮಷ್ಟಿಯ ಪ್ರಜ್ಞೆ, ಮನಸ್ಸಿನ ಮೇಲೆ ಆಗುತ್ತಿರುವ ಪರಿಣಾಮ, ಅತ್ಯಂತ ದುರಂತವಾದದ್ದು. ಮನುಷ್ಯ ಸಂಬಂಧಗಳನ್ನು ಕಳೆದುಕೊಂಡು,

ಪ್ರಾಕೃತಿಕ ಪರಿಸರವನ್ನು ಕಳೆದುಕೊಂಡು ಬದುಕು ನಿಂತಿರುವುದು, 'ಗಳಿಕೆಯ ಮೇಲೆಯೇ'!? ಹೀಗಾಗಿ ಈ ಶೀರ್ಷಿಕೆಯೂ ಅಭಿವೃದ್ಧಿ ರಾಷ್ಟ್ರದ ಪ್ರಗತಿಯತ್ತ ನಮ್ಮ ತನವನ್ನು ಅಸ್ತಿತ್ವವನ್ನು, ಅಸ್ಮಿತೆಯನ್ನು ಕಳೆದುಕೊಂಡಿರುವ ಪರಿಸ್ಥಿತಿಯ ವಿಶ್ಲೇಷಣಾತ್ಮ ಕಥೆಯಾಗಿದೆ.

ಸಮಾಜದ ಪ್ರಗತಿ ಎಂದರೆ ಮನುಷ್ಯನ ಅಂತರಂಗ ಬಹಿರಂಗದ ಬದಲಾವಣೆಗೆಗಳೇ ಎಂಬುವುದು. ಅನುಕರಣ ಸಂಸ್ಕೃತಿಯ ಜೀವಾಳವೇ!? ಕರಣ ಸಂಹಿತೆಗಳು ಮಾನವನ ಬೌದ್ಧಿಕ, ಮಾನಸಿಕ ಬೆಳವಣಿಗೆಗೆ ಪೋಷಕವಾಗಿದ್ದು ಮಾತ್ರವಲ್ಲ ಯಂತ್ರ ಬದುಕಿನತ್ತ ಸಾಗುತ್ತದೆ ಎಂಬುವುದು ಒಂದು ಸಂಗತಿ. ಸಂಘ ಜೀವಿಯಾದ ಮನುಷ್ಯ–ತಾನು, ತನ್ನದು, ನಾನು ನನ್ನದು ಎಂಬ ವ್ಯಕ್ತಿಕೇಂದ್ರ ಸ್ಥಿತಿಯನ್ನು ತಲುಪಿದಾಗ ಮನುಷ್ಯ ಮಾನವ ಸಂಬಂಧಗಳು ರೂಪಿಸುವುದಕ್ಕೆ ಹೇಗೆ ಸಾಧ್ಯ! ಭಾರತೀಯತೆ! ದೇಶಿಯತೆಯ ಸಾವಿಗೆ ಕಾರಣ. ಕರಣ ಸಂಹಿತೆಗಳೆಂದು ಹೇಳಬಹುದು.

ಈ ಕಥೆಯಲ್ಲಿ ಹೊಸ ಬದುಕಿನ ಹಾದಿಯನ್ನು ತೋರಿಸುತ್ತ, ಚಿತ್ರಿಸುತ್ತ, ಬದುಕಿನ ಚಿತ್ತಾರಗಳನ್ನು ಸೂಕ್ಷ್ಮವಾಗಿ ಸಂವೇದನಾಶೀಲತೆಯ ಮಹತ್ವವನ್ನು ಪಡೆದುಕೊಂಡಿದೆ.

ಭೂಮಿಯ ಮೇಲಿನ ವಿಶ್ವಾಸ–ಭಕ್ತಿ ಭಾವಗಳು ಹೋಗಿ ಕೇವಲ ಹಣ ಮಾಡುವ ಕೇಂದ್ರ. ಕೃಷಿಗೆ ಒತ್ತು ನೀಡುವುದರೊಂದಿಗೆ ಬಹುರಾಷ್ಟ್ರೀಯ ಸಂಸ್ಥೆಗಳಿಗೆ, ಕಾರ್ಯಸ್ಥಾನ ಒಂದಾದರೆ, ಮಗದೊಂದು ಅಭಿವೃದ್ಧಿಯ ಹೆಸರಲ್ಲಿ ನಡೆಯುತ್ತಿರುವ ದಂದೆ. ಎಂದರೆ ರಿಯಲ್ ಎಸ್ಟೇಟ್, ಇದು ಸುಲಭ ರೀತಿಯಲ್ಲಿ ಹಣದ ಸಂಪಾದನೆಯ ಮಾರ್ಗ 'ಭೂಮಿತಾಯಿ' ಎಂಬ ತತ್ತ್ವವು ಸಿದ್ಧಾಂತವು, ಭಾವವು ಕಾಣದಂತೆ ಮಾಯೆಯಾಗಿದೆ. ಭೂಮಿಯನ್ನು ಸುಮ್ಮನೆ ಕೊಟ್ಟರೂ ಬೇಸಾಯ ಮಾಡಲು ಹಿಂಜರಿಯುವ ಬಗೆ. ಕೆಸರಿನಲ್ಲಿ ಮುಳುಗಿ ತೇಲುವುದು ಬೇಡವಾಗಿದ್ದು, ಶುದ್ಧವಾಗಿ ಹಣಗಳಿಸುವ ಮಾರ್ಗವೆಂದರೆ ಉದ್ಯೋಗ. ಅದು ಯಾವುದೇ ಬಗೆಯಾಗಿರಲಿ ವ್ಯತ್ಯಾಸವಿಲ್ಲ. ಉನ್ನತ ಶಿಕ್ಷಣ ಪಡೆದವರು, ಪಾಶ್ಚಾತ್ಯ ದೇಶಕ್ಕೆ ವಲಸೆ ಹೋಗುವರು. ಶಿಕ್ಷಣವಿಲ್ಲದವರು ಇಲ್ಲಿಯೇ ಸಂಸ್ಥೆಯಲ್ಲಿ ಎಂತಹದೋ ನೌಕರಿ ಮಾಡಲು ಬಯಸುವಂತಹರು. ಹಾಗಾದರೆ ನಾಳಿನ ನಾಡಿನ ಭವಿಷ್ಯ ಏನಾಗಬಹುದು!? ದು ಊಹಿಸಲು ಕಷ್ಟ ಕರಣ ಸಂಹಿತೆಗಳಿಂದ ಜಗತ್ತೇ ಯಂತ್ರ ಜಗತ್ತಾಗಿ ರೂಪಾಂತರಗೊಳ್ಳುತ್ತಿದೆ. ಇನ್ನೂ ಭೂಮಿಯಲ್ಲಿ ಒಕ್ಕಲು ಮಾಡಲು ಯಾರು ತಯಾರು!? ವಿಷಾದದ ಸ್ಥಿತಿಯು ಏರ್ಪಟ್ಟಿರುವುದು ಕಂಡುಬರುತ್ತಿದೆ.

ಪ್ರಾದೇಶಿಕ ಮಹತ್ವ ಸಾರುವ ಭಾವನಾತ್ಮಕ ಭಾವ ಸಂವೇದನೆಯುಳ್ಳ ಕಥೆ ಎಂದರೆ 'ಒಡಲ ಹಂಗು'. ಒಂದು ಸಂಸಾರದ ಕತೆಯಾಗಿ ಕಂಡು ಬಂದರೂ ಒಂದು ಗ್ರಾಮೀಣ ಸಮಾಜವನ್ನು ಪ್ರತಿನಿಧಿಸುವುದು. ಸಹಜ ಬದುಕು, ಬದುಕಿನಲ್ಲಿ ಕಂಡು ಬರುವ ಸಮಸ್ಯೆಗಳು, ಆ ಸಮಸ್ಯೆಗಳ ಪರಿಹಾರ–ಕಾಣದ ದೇವರು, ಕಾಣುವ ದೇವರುಗಳ ನಡುವಿನ ಸಂಬಂಧದ ಕೊಂಡಿ, ತಾನು ಕಟ್ಟಿಕೊಂಡ ಮನೆ–ಸಂಸಾರವನ್ನು ಬಿಟ್ಟು ಹೋಗದ ಭಾವನಾತ್ಮಕ ಸಂಬಂಧದ–ಚಿಂತನೆಗಳು, ಲೌಕಿಕ ಜಗತ್ತು–ನೈಸರ್ಗಿಕತೆಯ ನೆಲೆ, ಅಲೌಕಿಕತೆಯ ಭಾವ ಒಟ್ಟಿನಲ್ಲಿ ಮೂರ್ತ ಮತ್ತು ಅಮೂರ್ತಗಳ ಸಂಬಂಧ ಸಮನ್ವಯತೆಗಳು ಪಾತ್ರಗಳ ಮೂಲಕ ಚಿತ್ತರಗೊಂಡಿರುವುದು. ಮನುಷ್ಯ ತನ್ನ ಬದುಕನ್ನು ಹಣೆದುಕೊಂಡದ್ದು ನಿಸರ್ಗದ ಪ್ರಕ್ರಿಯೆಗಳ ಮೂಲಕವೇ ಹಾಗಾಗಿ ಪ್ರಕೃತಿಯ ವಿರುದ್ಧ ಹೋಗುವುದು–ಹೋರಾಡುವುದು ಅಸಾಧ್ಯದ ಮಾತು ಮತ್ತು ಕ್ರಿಯೆಗಳು. ಹೀಗಾಗಿ ಬದುಕು ಎಂಬುವುದು ನಿಸರ್ಗದೊಂದಿಗೆ ಹೊರತು ಅದರ ಆಚೆಗೆ ಅಲ್ಲ ಎಂಬುವ ತತ್ವವು ನಿರೂಪಿತಗೊಂಡಿರುವುದು.

'ಒಡಲ ಹಂಗು' ಶೀರ್ಷಿಕೆ ಕಡೆ ಗಮನ ಹರಿಸುವುದು ಸೂಕ್ತ. ಮನುಷ್ಯನೆಂದರೆ ಯಾರು? ಆತನಿಗೆ ಪ್ರಾಥಮಿಕವಾಗಿ ಏನು ಬೇಕು? ಯಾಕೆ ಬೇಕು? ಸಮಾಜ ಎಂದಾದ ಮೇಲೆ ನಡವಳಿಕೆಗಳ ಕ್ರೋಢೀಕರಣಗೊಂಡಾಗ ಸಂಸ್ಕೃತಿ ಬೆಳೆಯುವುದು. ಸಂಪ್ರದಾಯ ಪರಂಪರೆಗಳ ಕಾಲದಿಂದ ಕಾಲಕ್ಕೆ ಮುಂದುವರಿಸುವಂತಹ ವಾಹಕಗಳು. ಅಂತೆಯೇ

'ಒಡಲ' ಶರೀರ, ಹೊಟ್ಟೆ, ಜಗತ್ತು, ಸಂಸಾರ, ಜೀವನ, ಬದುಕು ಒಂದಾದರೆ ನಿಸರ್ಗ ಮನೆ, ಮರ, ದುಡಿಮೆ, ಗಳಿಕೆ ಆಹಾರ, ಬಟ್ಟೆ ಮನೆ ಇವುಗಳನ್ನು ಪಡೆದು ಬುದ್ಧಿ–ಭಾವ, ಹೃದಯಗಳೊಂದಿಗೆ ಬೆಸೆದುಕೊಂಡಾಗ ಯಾವುದು ಯಾವುದರ ಹಂಗು? ಯಾವುದು ಯಾವುದರ ಅವಲಂಬಿತ?! ಈ ಬಗೆಯ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟವಾದರು ತಾತ್ವಿಕವಾದ ಅನುಭಾವಿಕ ನೆಲೆಯಲ್ಲಿ ಅಮೂರ್ತ ನೆಲೆಯಲ್ಲಿ ನಿಂತು ವಿಚಾರಿಸುವುದಾದರೆ ಈ ಎಲ್ಲದರ ಬೆಸುಗೆಯೇ ಬದುಕು. ಬದುಕು ಅವ್ಯಕ್ತ, ಅಗೋಚರವಾದ ವ್ಯಕ್ತವಾದ ನಂಬಿಕೆಯನ್ನು ಆಶ್ರಿತಗೊಂಡಿರುವುದು. ಎಲ್ಲೂ ಪ್ರತ್ಯೇಕವಾಗಿ

ಬಿಡಿಸಲು ಸಾಧ್ಯವಿಲ್ಲದ ಕೊಂಡಿಗಳಾಗಿವೆ. ಈ ಕೊಂಡಿಗಳೇ ಬದುಕಿನ ವಿವಿಧ ಸ್ವರೂಪಗಳನ್ನು ಹೆಣೆಯುತ್ತ ನಿರಂತರವಾಗಿ ಸಾಗುವುದು. ಹೀಗಾಗಿ 'ಹಂಗು' ಎಂಬ ಪದಕ್ಕೆ ಇಂತಿಷ್ಟೇ ಅರ್ಥ ಹೇಳುವುದು ಕಷ್ಟ. ಆದರೂ ಹೀಗೆ ಮತ್ತೊಂದು ದಿಕ್ಕಿನಿಂದ ವಿಚಾರ ಮಾಡಿದಾಗ ಶರೀರ–ಜೀವ–ಪ್ರಾಣ–ಆತ್ಮ ಇವುಗಳನ್ನು ಕೂಡಿದ್ದು ಚಾಲನ ಶಕ್ತಿಯುಳ್ಳ ಚೈತನ್ಯವುಳ್ಳ ವಸ್ತುಗಳ ಸಮೀಕರಣತ್ವವೇ ಬದುಕಿಗೆ ಮೂಲ ಶಕ್ತಿಯಾಗಿರುವುದು ಎಂಬುವುದನ್ನು ಗುರುತಿಸಬಹುದು.

ಈ ಕಥೆಯಲ್ಲಿ ಬರುವ ಪಾತ್ರಗಳು ಕೆಲವು ಮಾತ್ರ, ಒಂದು ಕುಟುಂಬ ಒಬ್ಬ ಆಧ್ಯಾತ್ಮಿಕ ಯೋಗಿ ಎಂದೂ, ವ್ಯವಸ್ಥೆಯ ವಿರುದ್ಧ ಹೋರಾಡುವಂತ 'ಉಗ್ರ' ಎಂದೂ ಕೂಡ ಗುರುತಿಸಬಹುದು. ಮಾದೇವಿ–ಕೇಂದ್ರಬಿಂದು. ಆಕೆಯ ಸುತ್ತ ಕಟ್ಟಿರುವ ಕತೆ. ಮಾದೇವಿಯ ಮಗಳು ಸಂಗವ್ವ ಅಳಿಯ ಶಂಕರ. 'ಗಳಿಕೆ' ಬದುಕಿನ ಹಿಂದೆ ಬೆನ್ನು ಹತ್ತಿರುವ, ಭೂಮಿಯನ್ನು ಕೃಷಿಯನ್ನು ತಿರಸ್ಕರಿಸುವರು. ಅದಕ್ಕೆ ಕಾರಣ ಪ್ರಾಕೃತಿಕ ವಿಕೋಪ. ಬದುಕು ಜೀವನ ಮುಖ್ಯವಾಗಿದ್ದರಿಂದ 'ಗುಳೆ' ಹೋಗುವುದು, ನಗರದಲ್ಲಿ ಕೈ ತುಂಬ ಕೆಲಸ ದೊರೆಯುವುದರಿಂದ ಹಣವು ಸಿಗುವುದರಿಂದ ಬದುಕು ಸಂತೃಪ್ತಿಯಲ್ಲಿರುವುದು. ಅಳಿಯನ ಅಭಿಪ್ರಾಯವನ್ನು ಗಮನಿಸುವುದು ಸೂಕ್ತ. 'ನಿಮ್ಮ ಹೊಲ–ಮನಿ–ಸವಾಸ ನಂಗ್ಗೆ ಬ್ಯಾಡ. ಬೇಕಿದ್ರ ಹೆಣ್ತೆನ್ನ ಕಳಸ್ರಿ, ಇಲ್ಲಂದ್ರ ಇಲ್ಲೆ ಇಟಗಳ್ರಿ'[೬] ಎಂದು ಹೇಳಿ ಹಳ್ಳಿಯಿಂದ ಪಲಾಯನ ಮಾಡುವುದು.

ಮಗಳು ತಾಯಿಯನ್ನು ಬಿಡಲಾರಳು, ಗಂಡನನ್ನು ಬಿಡಲಾರಳು, ಸಂದಿಗ್ಧತೆಯ ಸ್ಥಿತಿ. ತಾಯಿ ತನ್ನದೇ ಆದ ಕಲ್ಲಿನ ಮನೆಯಲ್ಲಿಯೇ ಬದುಕು ಮುಂದುವರೆಸುವ, ಅಂತ್ಯವನ್ನು ಅಲ್ಲೇ ಕಾಣುವ ನಿರ್ಧಾರ. ಒಂಟೀ ಬದುಕು–ಭಯದ ನಿವಾರಣೆಗೆಗಾಗಿ ಮಾವನನ್ನು ಕರಿಸಿಕೊಂಡದ್ದು, ಕಲ್ಲಿನ ಕೋಟೆಯಂತಹ ಮನೆಯಲ್ಲಿ ಸೋದರಮಾವ ಸೊಸೆ ಬದುಕು ನಡೆಸುತ್ತಿದದ್ದು. ಹಳ್ಳಿಯ ಜನ ಹಳ್ಳಿಯನ್ನು ಬಿಟ್ಟು ಕೆಲಸವನ್ನು ಹುಡುಕುತ್ತ ಪಟ್ಟಣದ ಕಡೆ ಹೋಗುವುದು ಕಾರಣ ಮಳೆಯಿಲ್ಲದೆ ಇರುವುದು ಇದು ಒಂದು ಸಮಸ್ಯೆಯೇ ಸರಿ. ಬದುಕಿಗಾಗಿ ದುಡಿಮೆ ಅನಿವಾರ್ಯ ಹಾಗಾಗಿ ಗುಳೆ ಹೋಗುವುದು ಅನಿವಾರ್ಯ. ಮತ್ತೊಂದು ಎಷ್ಟೋ ವರ್ಷಗಳ ನಂತರ ಬಂದ ಮಳೆ ಊರನ್ನೇ ಮುಳುಗಿಸುವಂತಹ ಬಗೆ, ನೀರಿನಲ್ಲಿ ಪ್ರಾಣಿಗಳು ಕೊಚ್ಚಿಕೊಂಡು ಹೋಗುತಿದ್ದು, ಕತ್ತಲೂ ಆವರಿಸಿದ್ದು, ನಿರಂತರ ಮಳೆ. ಈ ಬಗೆಗಿನ ಮಳೆ ನೋವು ತರಿಸುವಂತಹದೇ ಹೊರತು ಆನಂದ ಸಂತೋಷ ತರಿಸುವಂತಹದ್ದಲ್ಲ. ಮಾದೇವಿಯ ಮಾವ ಕಲ್ಲಯ್ಯನ ಸೊಸೆಯನ್ನು ಬಿಟ್ಟು ತಾನು ಹೆಣೆದ ನಾರಿನ ಹಗ್ಗಗಳನ್ನು ತೆಗೆದುಕೊಂಡು ತನ್ನ ಮನೆಯ ಕಡೆಗೆ ನೀರಿನಲ್ಲಿಯೇ ಸಾಗಿದ, ಹಾಗಾದರೆ ಆತ ಮನೆಯನ್ನು ತಲುಪಿದನೆ? ಅಥವಾ ಆ ನೀರು ಕರೆದುಕೊಂಡು ಹೋಗುವತ್ತ ಹೋದನೆ? ಅಥವಾ ನೀರಿನಲ್ಲಿಯೇ ಕರಗಿದನೆ? ಮನೆ ನೀರಿನಲ್ಲಿ ಮುಳುಗುತ್ತ ಬಂದಂತೆ ಮಾದೇವಿ ಮಾವನ ಬಗೆಗೆ ಯೋಚಿಸುತ್ತಿದ್ದಳು.

ಮಾದೇವಿಯ ಬದುಕಿನಲ್ಲಿ ಮತ್ತೊಬ್ಬ ಪುರುಷನ ಪ್ರವೇಶ–ಪರಮ. ಆಕೆಗೆ ಸಮಸ್ಯೆ ಒಂದಾಗಲೆಲ್ಲ ಆತನೇ ರಕ್ಷಣೆ ಮಾಡುತ್ತಿದ್ದ. ಒಂದರ್ಥದಲ್ಲಿ ರಕ್ಷಕನೂ ಆಗಿದ್ದ. ಆದರೆ ಮಾದೇವಿಗೆ ಆತನಲಿ ವಿಚಿತ್ರ ಆಕರ್ಷಣೆ ಇತ್ತು. ಆ ಬಗೆಯ ಆಕರ್ಷಣೆಗೆ ಆತ ಒಲಿದಿರಲಿಲ್ಲ. ಗಂಡ ಈರಯ್ಯ ತೀರಿದ ನಂತರ ಒಂಟೀ ಬದುಕು. ಮಗಳು ಹೋದದ್ದು, ದೂರ ಹೋದ ಮಗಳ ಸುದ್ದಿಗಾಗಿ ಕಾಯುತ್ತಿದ್ದರೆ, ಊರನ್ನು ನಾಶ ಮಾಡುವಂತಹ ನಿರಂತರ ಮಳೆ. ಹೆಚ್ಚು ಬರಗಾಲ, ಹೆಚ್ಚು ಮಳೆಯಿಂದ ಊರೇ ನಾಶ ವಾದಂತೆಯೇ. ಈ ಎಲ್ಲವೂ ಮನುಷ್ಯ ನಿರ್ಮಿಸಿದ ಬಂಧನ ಎನ್ನುವುದಕ್ಕಿಂತ ನಿಸರ್ಗ, ನೈಸರ್ಗಿಕ ಪ್ರಕ್ರಿಯೆಗಳಲ್ಲಿ ಎಲ್ಲರೂ ಸಮಾನರೇ. ನಿಸರ್ಗದ ಹಂಗನ್ನು ತೊರೆಯಲು ಸಾಧ್ಯವೇ? ಎಲ್ಲಿದ್ದರೂ ಹೇಗಿದ್ದರೂ ಬದುಕಲೇಬೇಕೆಂಬ ಛಲವೇ ಹೊರತು ಸಾಯಲು ನಿರ್ಧರಿಸಲಾರರೂ ಜಗತ್ತಿನ ಹಂಗನ್ನು, ಹಂಗಿನಿಂದ ಬಿಡುಗಡೆಯನ್ನು

ಪಡೆಯಲು ಸಾಧ್ಯವೇ? ಸಾಧ್ಯವೆಂದು ಹೇಳಬಹುದೇ?! ಅಸಾಧ್ಯ–ನಿಸರ್ಗ ಮತ್ತು ಮನುಷ್ಯನ ಸಂಬಂಧ ನಿಕಟವಾದದ್ದು, ಅವ್ಯಕ್ತ ಅಗೋಚರ ಅಗಮ್ಯ. ಗ್ರಾಮೀಣ ಜಗತ್ತಿನ ಕಥಾವಸ್ತುವು ಅನೇಕ ಆಯಾಮಗಳ ಮೂಲಕ ಪರಿಶೀಲನಾತ್ಮಕ ಸೃಜನಶೀಲತೆಯ ಪ್ರಕ್ರಿಯೆಯ ಅಭಿವ್ಯಕ್ತಿಯಾಗಿದೆ. ವಾಸ್ತವತೆಯ ತತ್ವಗಳ ಮೂಲಕ ಶೋಧನಾತ್ಮ ಬರಹವಾಗಿರುವುದು. ಸತ್ಯ ಘಟನೆಗಳು ಭಾಷಿಕ ರಚನೆಯ ಮೂಲಕ ಪ್ರಾದೇಶಿಕ ಮಹತ್ವವುಳ್ಳ ಅಭಿವ್ಯಕ್ತಿ. ಸಹಜತೆಯೆ ವಾಸ್ತವತೆಯ ಮೌಲ್ಯಗಳ ಚಿಂತನೆಗಳ ಅಭಿವ್ಯಕ್ತಿ ಕಥಾನಕದಲ್ಲಿ ಗುರುತಿಸಬಹುದು.

ಸಮಾಜ ಎಂದಾಗ ಒಂದು ಜನಪದ ಇಲ್ಲವೇ ದೇಶೀಯತೆ ಅಥವಾ ಗ್ರಾಮದ ಬದುಕು. ಇನ್ನೊಂದು ನಾಗರೀಕತೆಯು ರೂಪಿಸಿದ ನಗರ ಬದುಕು. ತಂತ್ರಜ್ಞಾನ ಮಾಹಿತಿಜ್ಞಾನ, ವಿಜ್ಞಾನ, ಅವಿಷ್ಕಾರಗಳಿಂದ ನಗರಗಳು ಪಾಶ್ಚಿತ್ಯೀಕರಣದ ಸಂಸ್ಕೃತಿಗೆ ಒಡ್ಡಿಕೊಂಡು ಬದುಕಿನ ವಿನ್ಯಾಸವನ್ನೇ ಸೃಷ್ಟಿಸಿಕೊಂಡದ್ದು. ಅಂದರೆ ಪಾಶ್ಚಾತೀಕರಣದ ಸಂಸ್ಕೃತಿ. ಯಾವುದೇ ಬಗೆಯ ಸಂಸ್ಕೃತಿಯಾದರೂ ಮನುಷ್ಯನೇ ಜೀವಿಸುವುದು. ನಿಸರ್ಗವನ್ನು ನಂಬಿಕೊಂಡು ನಿಸರ್ಗವೇ

ಜೀವಿಗಳನ್ನು ಜೀವಿಸುವಂತಹ ಶಕ್ತಿಯನ್ನು ಕೊಡುವುದು. ಇದು ಅಮೂರ್ತ ಕ್ರಿಯೆ. ಅವ್ಯಕ್ತ ಆಧಾರ ಜೀವಿಯು ನಿಸರ್ಗವನ್ನು, ನಿಸರ್ಗದ 'ಹಂಗನ್ನು' ಬಿಟ್ಟು ಜೀವಿಸಲಾರ' ಎಂಬುವುದನ್ನು ಕಥಾನಕಗಳಲ್ಲಿ ಕಾಣುತ್ತೇವೆ. ಮೂಲತಃ ನಿಸರ್ಗದ ನೈಸರ್ಗಿಕ ಕ್ರಿಯೆಗಳು ಎಂದರೆ ಹಸಿವು, ಬಾಯಾರಿಕೆ, ನಿದ್ದೆ ದೇಹದ ಸಂರಕ್ಷಣೆಗೆ ಬೇಕಿರುವ ಸಲಕರಣಗಳು, ಮನಸ್ಸಿನ ಸಂರಕ್ಷಣೆ ಭಾವನಾತ್ಮಕ ಸಂವೇದನಾಶೀಲ ಮನಸ್ಸು, ಹೃದಯ, ಬುದ್ಧಿ, ಭಾವಗಳ ಸಮನ್ವಯತೆಯೇ ಜೀವನ

ಎಂಬುವುದು. ಈ ಜೀವನಕ್ಕೆ ಪೋಷಕವಾಗಿ, ಪೂರಕವಾಗಿ ಮೌಲ್ಯಗಳು, ನಂಬಿಕೆಗಳು, ಧರ್ಮ–ಅರ್ಥಗಳ ಸಹಯೋಗದ
ಪ್ರಕ್ರಿಯೆಗಳು. ಯಾವುದೇ ಕಾಲವಾದರೂ ನೈಸರ್ಗಿಕ ಧರ್ಮವನ್ನು ಮೀರಿದ ಬದುಕು ಆಗಿರುವುದು. ಅಭಿವೃದ್ಧಿಯ
ಹೆಸರಲ್ಲಿ ಅನೇಕ ಬದಲಾವಣೆಗಳಾಗುವುದು. ಸುಖ-ಸಂತೋಷ-ನೆಮ್ಮದಿ- ಪ್ರೀತಿ-ಪ್ರೇಮ ವಾತ್ಸಲ್ಯ-ಹುಟ್ಟು-ಸಾವು-
ಸಂಸ್ಕಾರಗಳು ಹೀಗೆ ಅನೇಕ ಅನೇಕ ಧಾತುಗಳು ಬದುಕಿಗೆ. ಒಂದು ಒಂದಕ್ಕೆ ಅವಲಂಬಿತ ಹಾಗೂ ಪೋಷಕ,
ಪೂರಕವೂ ಕೂಡ. ಕಾಲ ಎನ್ನುವುದು ನಿರಂತರ ವಾಹಿನಿ ಬದಲಾವಣೆಯೇ ಅದರ ಗುಣ. ಆಯಾ ಕಾಲಕ್ಕೆ ಎಲ್ಲವು ಹೊಸದು. ಮಾತ್ರವಲ್ಲ, ಅದೇ ಸತ್ಯ ಕೂಡ. ಕಾಲ ಮತ್ತು ಮನಸ್ಸಿನ ಧರ್ಮಗಳೇ ವಾಸ್ತವತೆಯ ಬಿಂಬಗಳೆಂದು ಹೇಳಬಹುದು.

'ಕಟ್ಟುವ ಮತ್ತು ಕೆಡವುಂತಹ ಪ್ರವೃತ್ತಿಯಲ್ಲಿ ಕಷ್ಟ ಯಾವುದು? ಕಟ್ಟುವುದು ಕಷ್ಟ ಮತ್ತು ನಿಧಾನ, ಆದರೆ 'ಕೆಡುವುದು' ತೀವ್ರತೆ ಹಾಗು ಬೇಗ. ಒಳ್ಳೆಯದು–ಕೆಟ್ಟದು ಬದುಕಿನ ಎರಡು ನೆಲೆಗಳು. ತಂತ್ರಜ್ಞಾನ ವೈದ್ಯಕೀಯ ವಿಜ್ಞಾನ ಪ್ರಗತಿಯಲ್ಲಿದ್ದರೂ ಜೀವನಕ್ಕೆ ಆಧಾರವಾಗಿದ್ದರೂ, ಪೂರ್ವಗ್ರಹ ಪೀಡಿತವಾಗಿದ್ದರೂ ಹಿಂದಿನ ಸಂಸ್ಕಾರದ ವಾಸನೆಯನ್ನು ಬಿಡಲು ಸಾಧ್ಯವಿಲ್ಲದ ಪ್ರವೃತ್ತಿಯ ನೆಲೆಯನ್ನು ವೈಚಾರಿಕತೆಯ ಹಿನ್ನೆಲೆಯಲ್ಲಿ ವಸುಧೇಂದ್ರ ಅವರ 'ಬೇರಿಗೊಂದಿಷ್ಟು ಪ್ರೀತಿ' ಕಥೆ ನಿರೂಪಣೆಗೊಂಡಿದೆ. ಕಾಲಕ್ಕೆ ಬದ್ಧವಾಗಿ ಪರಿವರ್ತನೆಗೊಳ್ಳಬೇಕು ಎಂಬ ತರ್ಕವಿದ್ದರೂ ಬದಲಾವಣೆಗೆ ಶೀಘ್ರ ರೀತಿಯಲ್ಲಿ ರೂಪಾಂತರಗೊಳ್ಳಲು ಸಾಧ್ಯವಿಲ್ಲ. ಅದಕ್ಕೆ ಕಾರಣ 'ಕಾಲ', ಕಾಲದೊಂದಿಗೆ ಜೀವನ, ಜೀವನದೊಂದಿಗೆ ಕಾಲ ಎರಡು ವಿರುದ್ಧ ದಿಕ್ಕು ಆಗಿದ್ದರೂ ಬದುಕು ಎಂಬುವುದು ಕಾಲ, ಧರ್ಮ ಮತ್ತು ಮನೋಧರ್ಮದೊಂದಿಗೆ ಪರಂಪರೆಯ ರೂಢಿಗತ ಮೌಲ್ಯ ಮತ್ತು ನಂಬಿಕೆ, ಆಚಾರ ವಿಚಾರ ವಿಧಿನಿಯಮಕ್ಕೆ ಸಿಕ್ಕಿ ಹಾಕಿಕೊಂಡಿರುವುದು. ದಾಂಪತ್ಯ ಬದುಕಿನ ಚಿತ್ತಾರದ ಕತೆ–ಸಂತತಿಯ ಅಥವಾ ಪೀಳಿಗೆಯ ಮುಂದುವರಿಕೆಗೆ ಅಭೀಪ್ಸೆ

ಒಂದಾದರೆ, ಮತ್ತೊಂದು ದೈಹಿಕ ನ್ಯೂನತೆಯ ಚಿಂತನೆಗಳ ಸಂಕೇತಗಳ ಮೂಲಕ ಅಭಿವ್ಯಕ್ತಿಯಾದ ಕೌಟುಂಬಿಕ, ಭಾವನಾತ್ಮಕ ಹೃದಯಸ್ಪರ್ಶ ದ್ವಂದ್ವತೆಯ ಚಿಂತನೆಗಳಿಂದ ಕೂಡಿದೆ.

ಪ್ರಗತಿಯ ಅಭಿವೃದ್ಧಿಯ ಹೆಸರಿನಲ್ಲಿ ಜಗತ್ತು ವಿಕಾಸಗೊಳ್ಳುತ್ತಿದೆ, ಬದಲಾಗುತ್ತದೆ, ತನ್ನತನವನ್ನು ಕಳೆದುಕೊಳ್ಳುತ್ತಿದೆ. ವಿಕಾಸಶೀಲ ಪ್ರವೃತ್ತಿ ಪಾಶ್ಚಾತೀಕರಣ, ತಾಂತ್ರಿಕತೆಯಲ್ಲಿ ಮನುಷ್ಯನು ಯಂತ್ರನಾಗುವ, ಸಮಾನತೆಯಲ್ಲಿ ವ್ಯಕ್ತಿತ್ವವಿಲ್ಲದಿರುತ್ತವೆ. ಪುರುಷಪ್ರಧಾನ ಕುಟುಂಬ ವ್ಯವಸ್ಥೆಯಿಂದ ವ್ಯಕ್ತಿಗತ ವ್ಯವಸ್ಥೆ – 'ಪುರುಷ' ತನ್ನ ಪರಂಪರೆಯ, ಮೌಲ್ಯಗಳನ್ನು ತ್ಯಜಿಸುವುದು ಅದರಿಂದ ಮಾನಸಿಕ ಕ್ಷೋಭೆಗೆ ಗುರಿಯಾಗುವುದು. ಪಾಶಚಾತ್ಯೀಕರಣದ ಬದುಕಿನಲ್ಲಿ ಪುರುಷ–ಹೆಣ್ಣು ವೈಯುಕ್ತಿಕ ಅಥವಾ ಪ್ರತ್ಯೇಕ ವ್ಯಕ್ತಿತ್ವವನ್ನು ಬೆಳೆಸಿಕೊಂಡಿರುವುದು. ಭಾರತೀಯ ಅಥವಾ ತಮ್ಮ ಧರ್ಮ ಸಂಪ್ರದಾಯ ಸಂಸ್ಕೃತಿಯಿಂದ ದೂರ ಸರಿದದ್ದು ಪರಿಪೂರ್ಣವಾಗಿ ದೇಶೀಯತೆಯನ್ನು ಬಿಟ್ಟಿದ್ದು. ಹೊರ ದೇಶದ ಸಂಸ್ಕೃತಿಗೆ ಮಾರು ಹೋದದ್ದು, ಅಳವಡಿಸಿಕೊಂಡದ್ದೂ. ಹೆಂಡತಿ ಹೇಳಿದಂತೆ ಕೇಳುವುದು, ಕೇಳಲೇಬೇಕಾದ ಅನಿವಾರ್ಯ, ಹೆಣ್ಣು ತನ್ನ ಧರ್ಮದ ನಿಯಮಗಳನ್ನು ತಿರಸ್ಕರಿಸಿದ್ದು, ಹೆಸರನ್ನು ತನ್ನದನ್ನಾಗಿ ಮಾಡಿಕೊಂಡಿದ್ದು, ಒಟ್ಟಿನಲ್ಲಿ ದೇಶೀಯತೆಯನ್ನು ಬಿಟ್ಟು ಪರದೇಶದ ಸಂಸ್ಕೃತಿಯನ್ನು ಅಳವಡಿಸಿಕೊಂಡದ್ದು ಹೆಣ್ಣಿನ ಪ್ರಧಾನ ಕಥೆಯಾಗಿದೆ. ಮಾಲ್ ಸಂಸ್ಕೃತಿಯು ಯಾವುದೇ ಅದ್ಭುತ ಲೋಕಕ್ಕೆ ಕರೆದು ಸಾಗುವಂತಹದು. ಇದ್ದು ವಾಣಿಜ್ಯ ವ್ಯವಹಾರ ಕೇಂದ್ರ. ಅಂತೆಯೇ ಬದುಕು ಕೂಡ ವ್ಯವಹಾರದ ವಿನಿಮಯ ಕೇಂದ್ರವಾಗಿದೆ.

ಈ ಎರಡನ್ನೂ ಹೋಲಿಕೆ ಮಾಡುವಲ್ಲಿ ಮನಸ್ಸು ತರ್ಕಿಸುತ್ತದೆ. ಪಾಶ್ಚಾತ್ಯದ ಲೋಕದಲ್ಲಿ ನಿಂತು ನಮ್ಮ ದೇಶದ ಬಗ್ಗೆ ಆಲೋಚಿಸಿದರೆ ನಮ್ಮ ದೇಶವೇ ಸುಂದರ ಕಾಣುವುದು. ಹೊರ ಜಗತ್ತಿನ ಸಂಸ್ಕೃತಿ ಎಂದರೆ ಸ್ಪರ್ಧೆ ದುಡಿಮೆ–ಗಳಿಕೆ ಜೀವನದ ಮೂರು ದಾರಿಗಳು. ಅದರೊಂದಿಗೆ ಗಳಿಸಿದ್ದನ್ನು ಮಾಲ್‌ಗಳಲ್ಲಿ ಖರ್ಚು ಮಾಡುವುದು.

ಹೆಣ್ಣು ಬದಲಾದ ಹೊಸ ಜಗತ್ತಿಗೆ ತೆರೆದುಕೊಂಡ ಬಗ್ಗೆ, ದೇಶಿಯತೆ ಬಗ್ಗೆ ಅಭಿಮಾನವುಳ್ಳ ನಾಯಕ, ಹುಟ್ಟಿದ ದೇಶದಲ್ಲಿ ಕೃಷಿ ಮಾಡುವ ಆಸೆಯಿಂದ ಆ ದೇಶಿಯ ಮಣ್ಣಿನಲ್ಲಿ ಬದುಕುವ ಆಸೆಯಿಂದ ಭೂಮಿ ಕೊಂಡುಕೊಂಡ ಬಗೆ, ಅಲ್ಲಿಯೂ ಮೋಸವಾಗದ ಸ್ಥಿತಿ, ಬದುಕಿನ ಕ್ಷಣಗಳು ಯಂತ್ರಗಳಂತೆಯೇ ಕಳೆದುಹೋಗುವ ಒಂದು ರೀತಿಯ ಮಾನಸಿಕ ಅಸ್ಪಷ್ಟತೆಯ ಸ್ಥಿತಿ, ದೇಶೀಯತೆಯ ಪ್ರೇಮದ ಉತ್ಕಟ ಸ್ಥಿತಿ, ಸಂಬಂಧಗಳನ್ನು ಬೆಸೆಯುವಲ್ಲಿ ಮಣ್ಣಿನ ನೆಲದ ಪಾತ್ರ,

ತಾತ್ವಿಕ ಜೀವನ ದರ್ಶನದ ನಿಲುವ, ಬದುಕಿನ ಸಿದ್ಧಾಂತದ ನೆಲೆ, ಮಣ್ಣಿನ ವಾಸನೆ, ಸಾರ್ವಕಾಲಿಕ ಸತ್ಯ ದರ್ಶನ, ಇದು ದೇಶದ ಮೇಲಿನ ಪ್ರೀತಿ, ಪ್ರಗತಿ–ಅಭಿವೃದ್ಧಿ–ದುಡಿಮೆ–ಗಳಿಕೆ ವ್ಯಯ, ಹೂಡಿಕೆ ಯಂತ್ರ ನಾಗರಿಕತೆ ಬದುಕಿನಲ್ಲಿ ಹೊರ ದೇಶದಲ್ಲಿ ಧರ್ಮದ ನಿಯಮ–ವಿಧಿಗಳನ್ನು ತೂರಿಬಿಡುವ ವ್ಯಕ್ತಿ ಸ್ವಾತಂತ್ರ್ಯದಿಂದ ನಡೆಯುವ ಹೆಣ್ಣಿನ ನಿಲುವು, ಪುರುಷ ಹೆಂಡತಿಯ ಅನುಯಾಯಿಯಾ ಆಗಿರುವಂತಹ ಪ್ರಸಂಗ ಇದು ಸಂಸ್ಕೃತಿ ಬದಲಾವಣೆ–ಸಂಸ್ಕೃತೀಕರಣದ ಸ್ವರೂಪ. ಹೀಗಾಗಿ ದೇಶ–ಕಾಲ–ಸಂಸ್ಕೃತಿಯು ವ್ಯಕ್ತಿಯ ಮೇಲೆ ವ್ಯಕ್ತಿತ್ವದ ಮೇಲೆ ಆಗುತ್ತಿರುವ ದಬ್ಬಾಳಿಕೆಯ ಪರಿಣಾಮಗಳು ಮಾನವನ ಸಂಬಂಧಗಳು ಕೂಡ 'ವಸ್ತು' ಜಗತ್ತಿಗೆ ಹತ್ತಿರವಾದವು. ಆದರೆ ದೇಶೀಯ ಪ್ರಜ್ಞೆ ಮಣ್ಣಿನ ವಾಸನೆ ಜೀವಂತಿಕೆಯ ಸೆಲೆ.

೧೦

"ಈ ಮಣ್ಣು ಬೆಸೆಯುವ ಬಾಂಧವ್ಯವನ್ನು ಇನ್ನು ಯಾರೂ ಯಾವ ಧರ್ಮವೂ ಬೆಸೆಯಲು ಸಾಧ್ಯವಿಲ್ಲ" ಎಂಬ ಹೇಳಿಕೆಯಲ್ಲಿ ದೇಶೀಯ ಜೀವಂತಿಕೆಯ ಬದುಕಿನ ಸುಂದರತನದ ಭಾವದ ಸ್ವರೂಪವನ್ನು ಕಾಣಬಹುದು. ಮಣ್ಣಿನ ಮಹತ್ವವನ್ನು ಕುರಿತು 'ಮಣ್ಣಿನ ಅಗಾಧ ಶಕ್ತಿ, ಅದ್ಭುತ ಶಕ್ತಿ ಸೃಷ್ಟಿ ವೈಚಿತ್ರ್ಯ ವರ್ಣನಾತೀತ, ಸೃಜನಶೀಲತೆ ಅದರ ಒಡಲಾಳದ ಶೀತಲ ಜೀವದ್ರವ, ಅದರ ಗರ್ಭದ ಭೀಕರ ಕಾವು' ಎಂದು ಹೇಳಿರುವಲ್ಲಿ ಗುರುತಿಸಲಾಗಿದೆ.

ದೇಶೀಯತೆ ಮತ್ತು ಪಾಶ್ಚಾತ್ಯ ವಿಚಾರಗಳ ನಡುವೆ ಆಂತರೀಕ ಸಂಘರ್ಷಗಳು, ಭಾರತೀಯ ಪರಿಕಲ್ಪನೆಗಳಲ್ಲಿರುವ ಸಂಬಂಧಗಳು, ಭೂಮಿಯ ಬಗೆಗಿನ ಒಲವು ತಿರಸ್ಕಾರ, ವ್ಯವಸ್ಥೆಯ ಬಗೆಗಿನ ಆಲೋಚನೆ, ಆಚಾರ್ಯ ವಿನೋಬಾ ಭಾವೆ ಅವರ ಸರ್ವೋದಯದ ವಿಚಾರಗಳು ಒಂದು ಕಾಲದಲ್ಲಿ ಮಹತ್ವದ ಸ್ಥಾನ ಪಡೆದಿದ್ದು,

ವ್ಯವಸ್ಥೆಯೊಳಗಿನ ಕ್ಷುದ್ರತೆಯ ನೆಲೆಯಿಂದ ಹೋರಾಡುವಂತಹ 'ನಕ್ಸಲರ' ಚಿಂತನೆಗಳು, ಭೂಒಡೆಯ ಜಮೀನುದಾರನಾಗಿದ್ದು ಭಯದಿಂದಲೋ, ವೈರಾಗ್ಯದ ಮನೋಭಾವದಿಂದಲೋ, ಉದಾಸೀನದ ಭಾವದಿಂದಲೋ, ಅಷ್ಟೇ ಅಲ್ಲ ತನ್ನ ಮಕ್ಕಳಿಗೆ ಬೇಡವಾದದ್ದು ತನಗೆ ಏಕೆ? ಎಂಬ ಮಾನಸಿಕ ಅಸ್ವಸ್ಥತೆಯೋ ಒಟ್ಟಿನಲ್ಲಿ ಭೂಮಿ ಹಂಚಿ ತನ್ನತನವನ್ನು ಪ್ರಾಣವನ್ನು ಉಳಿಸಿ ಉದಾರೀತನದ ವ್ಯಕ್ತಿತ್ವವನ್ನು ತೋರಿಸುವಲ್ಲಿಯೂ ಸೋತ ಸ್ಥಿತಿ ಒಂದು ಬಗೆಯಾದರೆ, ಇನ್ನೊಂದು ಕಡೆ ಪಾಶ್ಚಾತ್ಯ ಬಂಡವಾಳಗಾರರು ಬಂಡವಾಳ ಹೂಡುವುದು, ಆಗ 'ಭೂಮಿಗೆ' ಹೆಚ್ಚು ಬೆಲೆ ಬರುವುದು, ಅದಕ್ಕಾಗಿ ಭೂಮಿಯನ್ನು ಕಾಯ್ದುಕೊಂಡಿರಲು ಬೇಕಿರುವ ಎಲ್ಲಾ ಬಗೆಯ ವ್ಯವಸ್ಥೆ ಮಾಡಿದ್ದು, ಕಾವಲು ಕಾಯುತ್ತಿರುವ ತಂದೆ ಭೂಮಿಯ ರಕ್ಷಣೆ ಮಾಡುವರು, ಉತ್ತಮ ಬೆಲೆಯ ಸಂದರ್ಭದಲ್ಲಿ ಬಿಕರಿ ಮಾಡಿದರೆ ಲಾಭ ಎಂದು ಯೋಚಿಸಿದ್ದ ಮಕ್ಕಳು, ತಂದೆಯ ಮನೋಲೋಕವನ್ನು ಅರ್ಥಮಾಡಿಕೊಳ್ಳದೆ, ಪಾಶ್ಚಾತ್ಯರ ಪ್ರಭಾವಕ್ಕೆ ಒಳಗಾಗಿ ಅವರಂತೆ ಬದುಕು ಸಾಗಿಸುತ್ತಿದ್ದದ್ದು, ತಂದೆಯ ಗಳಿಕೆ, ಪರಂಪರಾಗತವಾಗಿ ಬೆಳೆದು ಬಂದ ಭೂಮಿ. ಇವುಗಳ ಬಗೆಗೆ ಯಾವುದೇ ಬಗೆಯ ಸಂಬಂಧಗಳಿಲ್ಲ ಎಂಬಂತೆ ವರ್ತಿಸುವಂತಹ ವರ್ತನೆಗಳು, ಒಂದು ಕಡೆ ಹುಟ್ಟಿ ಬೆಳೆದ ವಂಶದ ಬಗೆಗೆ, ಪರಿಸರವನ್ನು ಮಾನವ ಸಂಬಂಧಗಳನ್ನು ಬಿಡದ ಸ್ಥಿತಿ, ವ್ಯವಸ್ಥೆಯೊಂದಿಗೆ ಹೊಂದುಕೊಂಡು ಹೋಗುವ ಬಗೆ ಒಂದಾದರೆ ಸಾಮಾಜಿಕ ಪರಿಸ್ಥಿತಿಯು ಬದಲಾದ ಬಗೆಗಿನ ಆಲೋಚನೆಗಳು, ಬಹುಮುಖ್ಯವಾದುದು.

ಶಿಕ್ಷಣ ಕ್ರಾಂತಿಯಿಂದ ದೇಶಸೇವೆ ಪ್ರಗತಿ ಹೊಂದುತ್ತಿದೆ. ಅಭಿವೃದ್ಧಿಗೊಳ್ಳುತ್ತಿದೆ. ಪ್ರತಿಷ್ಠಿತ ರಾಷ್ಟ್ರಗಳೊಂದಿಗೆ ಸ್ಪರ್ಧೆಗೆ ಇಳಿದಿದೆ, ಹಗಲುರಾತ್ರಿಗಳ ವ್ಯತ್ಯಾಸವಿರದ, ದುಡಿಯುವ, ಗಳಿಸುವ ಯಾಂತ್ರಿಕ ಸುಖವನ್ನು ಅನುಭವಿಸುತ್ತಿರುವಂತಹ ಅನುಕರಣಾತ್ಮಕ ಸ್ಥಿತಿಯು ಒದಗಿ ಬಂದಿದೆ. ಬದಲಾವಣೆಗೆ ಒಪ್ಪಿಕೊಂಡ ಮನಸ್ಸು ಆ ಬದಲಾವಣೆಗೆ ಹೊಸ ಸಾಮಾಜಿಕ ತನಕ್ಕೆ ಸಂಸ್ಕೃತಿಗೆ ಒಗ್ಗಿ ಹೋಗಿರುವ ಮನಸ್ಸು, ತನ್ನ ದೇಶ, ಹುಟ್ಟಿದ ಊರು ಪರಿಸರಗಳ ಬಗ್ಗೆ ಯಾವುದೇ ಬಗೆಯ ಮೋಹವಿಲ್ಲ. ಅವರ ದೃಷ್ಟಿಗೆ ಅದು ಏನೂ ಅಲ್ಲ. ತಾನು, ತನ್ನ ಓದು, ತನ್ನೀ ಶ್ರಮಗಳಿಗೆ, ತನ್ನ ಬದುಕು ಇಷ್ಟೇ; ವ್ಯಕ್ತಿ ಕೇಂದ್ರಿಕೃತ ಸಂಸ್ಕೃತಿಯು ಆಧುನಿಕತೆಯ ಮೂಲ ಮಂತ್ರವಾಗಿದೆ.

ಹೀಗಾಗಿ ತಮ್ಮ ತಂದೆ ಗಳಿಸಿದ್ದು, ತಮ್ಮ ಪಿತೃಪಿತಾಮಹರು ಗಳಿಸಿದ್ದು ಒಂದಕ್ಕಿಂತ ಮೂರರಷ್ಟು ಹೆಚ್ಚಾಗಿ ಬೆಳೆದ ಭೂಮಿಯ ವಿಸ್ತರ್ಣತೆಯ ಬಗ್ಗೆ ಯಾವ ಬಗೆಯ ಪ್ರೀತಿ ಮಮಕಾರ ನಮ್ಮದು ಎಂಬ ಅಭಿಮಾನವಿಲ್ಲದ್ ಪಾಶ್ಚಾತ್ಯೀಕರಣಕ್ಕೆ ಗುಲಾಮರಾಗಿರುವುದು. ಅಷ್ಟೇ ಅಲ್ಲ ಭೂಮಿಗೆ ಬೆಲೆಯಿದೆ ಆ ಬೆಲೆಯಿಂದ ಆರ್ಥಿಕವಾಗಿ ಬೆಳೆಯಬಹುದು ಎಂಬ ಇನ್ನೊಂದು ಸ್ವಾರ್ಥ ಚಿಂತನೆ ಮನುಷ್ಯ ಸಂಬಂಧಗಳನ್ನು ಮರೆಯಾಗಿಸುವ ಸ್ಥಿತಿಯನ್ನು ಚಿತ್ರಿಸುತ್ತದೆ.

ವ್ಯವಸ್ಥೆಯೊಳಗಿನ ಉಗ್ರತ್ವಕ್ಕೆ ಕಾರಣರು ಯಾರು? ಉಗ್ರರು ಹುಟ್ಟಿಕೊಂಡದ್ದು ಹೇಗೆ?! ವ್ಯವಸ್ಥೆಯಲ್ಲಿರುವ ನ್ಯೂನತೆಯನ್ನು ಸರಿಪಡಿಸಲು ಸಲುವಾಗಿಯೇ ಅಥವಾ ಉಗ್ರರೇ ಚಳುವಳಿಗಾರರೇ ಭೂಗತ ಹೋರಾಟಗಾರರು ತಮ್ಮದೇ ಆದ ರೀತಿಯಲ್ಲಿ ವ್ಯವಸ್ಥೆ ರೂಪಿಸುವುದೇ ಪ್ರಶ್ನೆ ಉಳ್ಳವರು ಬೆಳೆಯುತ್ತಲೇ ಇರುವರು ಇಲ್ಲದವರು ಶೋಷಣೆಗೆ ಒಳಗಾಗಿ ಬಡವರಾಗಿಯೇ ಉಳಿಯುವರು, ಇದಕ್ಕೂ ಒಂದು ಪರಂಪರೆ ಇದೆ ಎಂಬುವುದು ಅರ್ಥಮಾಡಿಕೊಳ್ಳಬಹುದು. ಇಂತಹ ಪರಂಪರೆಗೆ, ಸಂಪ್ರದಾಯಕ್ಕೆ ವಿರೋಧಿ 'ಸಮಾನತೆ'ಯನ್ನು ಬೆಳೆಸುವ ರೂಪಿಸುವ ಸಲುವಾಗಿಯೇ ತೆರೆಯ ಮರೆಯಲ್ಲಿ ಹೋರಾಟಗಾರರು ಹೋರಾಡುವುದು. ಇದು ಎಷ್ಟರಮಟ್ಟಿಗೆ ಸರಿ ! ಈ ತತ್ವ ಸಿದ್ಧಾಂತಗಳು ಬದುಕಿನೊಂದಿಗೆ ಬೆಸೆಯಲು ಸಾಧ್ಯವೇ ! ಸ್ವಾತಂತ್ರ್ಯೋತ್ತರ ಸಂದರ್ಭವನ್ನು ನೆನೆಪು ಮಾಡಿಕೊಂಡಾಗ, ಭೂಹೀನರಿಗೆ ಭೂಮಿ ದಾನ ಮಾಡುವ ಒಂದು ಪದ್ಧತಿಯನ್ನು ತಂದದ್ದು ಗೇಣಿ ಪದ್ಧತಿಯನ್ನು ಮುಕ್ತಗೊಳಿಸಿದ್ದು ಭೂ ಒಡೆಯ ಜಮೀನ್ದಾರ ಪದ್ಧತಿಯನ್ನು ತೆಗೆದುಹಾಕುವುದು, ಹೆಚ್ಚು ಭೂಮಿ ಉಳ್ಳದರು, ಭೂಹೀನರಿಗೆ ದಾನ ಮಾಡುವಂತಹ ಪದ್ಧತಿ ಬಂದದ್ದು, ಕೃಷಿ ಪ್ರಧಾನವಾದ ಸಮಾಜದಲ್ಲಿ ಭೂಮಿಗೆ ಬೆಲೆ ಇತ್ತು. ಬದುಕು ಇರುವುದು ಇದ್ದದ್ದು ಭೂಮಿಯಿಂದ ಎಂದಾಗಿ ಪರಿಗಣಿಸಿತ್ತು. ಆದರೆ ಪಾಶ್ಚಾತ್ಯೀಕರಣ, ಜಾಗತೀಕರಣದ ಸಂದರ್ಭದಲ್ಲಿ ಆರ್ಥಿಕ ಉದಾರನೀತಿಯ ಸಂದರ್ಭದಲ್ಲಿ ಭೂಮಿಯ ಮೇಲಿನ ಪ್ರೀತಿ, ಅಭಿಮಾನ ಇಲ್ಲದೆ ಎಲ್ಲಕ್ಕೂ ಬೆಲೆ ಕಟ್ಟುವುದು ಮಾತ್ರವಲ್ಲ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ಹೂಡಿಕೆದಾರರು ಬರುವುದು, ಬಂಡವಾಳ ಹೂಡುವುದು, ಭೂಮಿಯನ್ನು ಕೊಂಡುಕೊಳ್ಳುವುದು, ಹೊಸ ಉದ್ಯಮಗಳನ್ನು ಹುಟ್ಟಿಸುವುದು, ಉದ್ಯೋಗಗಳನ್ನು ಸೃಷ್ಟಿಸುವುದು, ದುಡಿಮೆ-ಗಳಿಕೆ ಶ್ರಮ- ವ್ಯಯವೇ ಜೀವನ ಎಂದಾಗಿ ಪರಿಗಣಿಸಲಾಗಿದೆ.

ಒಟ್ಟಿನಲ್ಲಿ ಭೂಮಿ ಎನ್ನುವುದು 'ಉದ್ಯಮ' ಶೀಲತ್ವದ ನೆಲೆಯಲ್ಲಿ ನಿಂದದ್ದು ಮಾತ್ರವಲ್ಲ ಪರತಂತ್ರದ ಹಿಡಿತಕ್ಕೆ ಸಿಕ್ಕಿಕೊಳ್ಳುವುದು ಇಲ್ಲಿ ಗಮನಿಸಬಹುದು. ಉದ್ಯಮ-ಉದ್ಯೋಗ-ಶ್ರಮ-ದುಡಿಮೆ-ಗಳಿಕೆ ಇದೇ ಬದುಕು ಎಂಬ ತತ್ವ-

ಸಿದ್ಧಾಂತವೂ ಹುಟ್ಟಿಕೊಂಡದ್ದು ದೇಶಿಯತೆಯ ಸ್ಥಾನದಲ್ಲಿ ಅಂತರರಾಷ್ಟ್ರೀಯತೆಯ ಭಾವನೆಗಳು ಸ್ಥಾನ ಪಡೆದಿದ್ದು ಸಂಸ್ಕೃತೀಕರಣಗೊಂಡಿದಕ್ಕೆ ಮೂಲ ಬಂಡವಾಳವಾಯಿತು.

ಅಮರೇಶ ಅವರ 'ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು' ಕಥೆಯೊಂದು ದುರಂತ ಕಥೆ ಎಂದಾಗಿ ಹೇಳಬಹುದು. ದೇಶಿಯತೆಯ ನಾಶ, ಮನುಷ್ಯ ಸಂಬಂಧಗಳ ಸಾವು ಮನೋಕ್ಲೋಷ, ಅನಾಥಪ್ರಜ್ಞೆ, ಅಸಹಾಯಕತನ, ದಬ್ಬಾಳಿಕೆ,

ದೌರ್ಜನ್ಯತೆ. ಸಹಾನುಭೂತಿ, ಪ್ರೀತಿ, ವಿಶ್ವಾಸ ಸಂಬಂಧಗಳಿಗೆ ಸ್ಥಾನವೇ? ಸ್ಥಾನವಿಲ್ಲ. ಹಿಂದೆ ಜಮೀನಿನಲ್ಲಿ ದುಡಿಯುತ್ತಿದ್ದ ದುಡಿಮೆಗಾರ 'ರೈತ' ಎಂದಾಗಿದ್ದು, ಇಂದು ಆ ಪದವಿಯೇ ಬೇಡ, ಭೂಮಿಯಿಂದ ದುಡಿದು ಗಳಿಸಿಕೊಳ್ಳುವುದೂ ಬೇಡ, ಭೂಮಿ ಸುಮ್ಮನೇ ನೀಡಿದರೂ, ದಾನ ಮಾಡಿದರೂ ಅದರ ಸಹವಾಸವೇ ಬೇಡ ಎಂದಾಗಿ ಕೃಷಿಯನ್ನು ನಂಬಿ ಬದುಕಿದ ರೈತಾಪಿ ವರ್ಗದವರು ಭೂಮಿಯನ್ನು ದಾನದ ರೂಪದಲ್ಲಿ ಸ್ವೀಕರಿಸಲಾರರು. ನಗರದಲ್ಲಿ ದುಡಿದರೆ ಕೈ ತುಂಬಾ ಸಂಪಾದನೆ ಬರುತ್ತದೆ. 'ದುಡಿಮೆಯೇ ದೇವರು' ಆದರಲ್ಲೂ ನಗರದಲ್ಲಿ ಉತ್ತಮ ವೇಷಭೂಷಣ ತೊಟ್ಟು ಶಿಸ್ತಿನಿಂದ ಕೆಲಸಕ್ಕೆ ಹೋಗುವ ರೀತಿಯಲ್ಲಿ ಮಳೆಗಾಗಿ ಕಾದು, ಮಣ್ಣಿನ ಕೆಸರಲ್ಲಿ ದುಡಿದು ಗಳಿಕೆಯಲ್ಲೂ ನಷ್ಟ ಅನುಭವಿಸುವುದು

ಮಾತ್ರವಲ್ಲ ಭೂ ಒಡೆಯನೇ ಫಲವನ್ನು ಅನುಭವಿಸುವವನು ಆತನೇ. ಆದರೆ 'ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು' ಕಥೆಯಲ್ಲಿ ಜಮೀನ್ದಾರನು ಭೂಮಿ ಒಡೆಯನಾಗಿದ್ದರೂ ಬೆಳೆದದ್ದರಲ್ಲೂ ಎಲ್ಲರಿಗೂ ಪಾಲು ನೀಡಿ ಎಲ್ಲರೊಂದಿಗೂ ಸಹಬಾಳ್ವೆಯ ಜೀವನ ನಡೆಸುತಿದ್ದ. ಇಲ್ಲಿ ಗಾಂಧಿಯ ತತ್ವವೊಂದನ್ನು ನೆನಪು ಮಾಡಿಕೊಳ್ಳಬಹುದು, 'ಸಹಬಾಳ್ವೆ ಮತ್ತು ಸಮಬಾಳ್ವೆ' ಈ ತತ್ವ ಈ ಕಥೆಯಲ್ಲಿ ಅಸ್ತಿತ್ವವನ್ನು ಕಳೆದುಕೊಂಡಿದೆ.

ನಗರ ಜೀವನದಲ್ಲಿ ಸ್ವಂತ ದುಡಿಮೆ, ವ್ಯಾಪಾರ, ಗಳಿಕೆ, ವ್ಯಾಪಾರ ಶಿಸ್ತನ್ನು ತಿಳಿಸಿಕೊಡುವ ಮಾಯಿ, ಮತ್ತೆ ಆಕೆಯ ಮಗ ಜೀವನ ಸಾಗಿಸುವ ಸಲುವಾಗಿ ಗಳಿಕೆಯೇ ವಿನಃ ಗಳಿಕೆಯೇ ಜೀವನವಲ್ಲ ಎಂದು ನಂಬಿ, ಮಾನವೀಯ ಮೌಲ್ಯಗಳನ್ನು ರಕ್ಷಿಸಿಕೊಂಡು, ನೊಂದ ಜೀವಿಗಳಿಗೆ ಸೇವೆ ಮಾಡುವ ಸೇವಾ ಮನೋಭಾವದವರು. ಸ್ವಾರ್ಥಪರವಾಗಿ ನಗರದಲ್ಲಿ ನಾಯಕರು ಹಚ್ಚುವ ಕೋಮಿನ ಬೆಂಕಿಯಲ್ಲಿ ಗಾಯಗೊಂಡವರಿಗೆ ನಿಸ್ವಾರ್ಥವಾಗಿ ಹಗಲು-ಇರುಳು ಸೇವೆ ಮಾಡುವ ಮಾಯಿಯ ಪ್ರೀತಿಯ ಮನೋಭಾವ, ಅನುಕಂಪ, ಸ್ಪಂದನಾಶೀಲತೆ, ನಾನು ನನ್ನ ಮನೆ ಎಂಬ ಸಾಂಸಾರಿಕ ಬಂಧನಗಳಿಗೆ ಅಂಟಿಯೂ ಅಂಟದಂತೆ ಇರುವ ಸ್ಥಿತಿ ಸಮಾಜ ಸೇವಕಿಯಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಹೆಣ್ಣಿನ ಮತ್ತು ಮಾನವೀಯತೆಯನ್ನು ಮೆರೆಸುವ ಕಥೆ ಕಾಯ್ಕಿಣಿ ಅವರ 'ಅಮೃತಬಳ್ಳಿ ಕಷಾಯ' ಕಥೆ.

ಅಮೃತ-ಅಮೃತತ್ವವನ್ನು ಕಾಣುವುದು ಸೇವಾ ಕೈಂಕರ್ಯದಲ್ಲಿ, ಬದುಕಿನ ಸಾರ್ಥಕತೆಯನ್ನು ಪಡೆಯುವುದು. ಮಾಯಿಯ ಪ್ರಭಾವದಿಂದ ಗಂಗಾಧರನಂಥ ಸಾಮಾನ್ಯನಲ್ಲಿಯೂ ಪರಿವರ್ತನೆ ನಡೆಯುವುದು. ಮತ್ತೊಬ್ಬರ ಬದುಕನ್ನು ಕಟ್ಟಿ ಕೊಡುವಲ್ಲಿ ಗೋಡೆಯ ಮೇಲಿನ ತಂದೆಯ ಫೋಟೋ ಸಹಾಯವಾಗಲಿ ಎಂದು ನೀಡುವ ಉದಾರ ಮನೋಭಾವ, ಪ್ರೀತಿಯ ಮನೋಭಾವ, ನಿಸ್ವಾರ್ಥ ಸೇವೆ, ಮೌಲ್ಯಯುತ ಬದುಕಿನ ಚಿತ್ತಾರವೇ 'ಅಮೃತಬಳ್ಳಿ ಕಷಾಯ'ದ ಕೇಂದ್ರ. ನಗರದಲ್ಲಿ ವ್ಯವಹಾರ ನಿರ್ವಹಿಸುತ್ತ ಬದುಕು ಸಾಗಿಸುತ್ತಿದ್ದರೂ ಯಾವುದೇ ಮೋಹಕ್ಕೆ ಒಳಗಾಗದೆ, ಯಾವುದೇ ಪ್ರಭಾವ-ಪ್ರೇರಣೆಗೆ ಸಿಲುಕದೆ ಕೈಗೊಳ್ಳುವ ಸೇವಾ ಮನೋಭಾವ ಉನ್ನತ ಸಂಸ್ಕಾರದ ಮಾದರಿಯಾಗಿದೆ. ಯಾವುದೇ ಪ್ರಭಾವ ಪ್ರೇರಣೆಗಳಿಗೆ ಒಳಗಾದರೂ, ವೈಜ್ಞಾನಿಕವಾಗಿ ತಂತ್ರಜ್ಞಾನಿಕವಾಗಿ ವ್ಯಾವಹಾರಿಕವಾಗಿ ಶೈಕ್ಷಣಿಕವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿಹೊಂದಿದರೂ, ಪ್ರಾದೇಶಿಕವಾಗಿ ನಂಬಿಕೊಂಡು ಬಂದಂತಹ ಪಾರಂಪರಿಕವಾಗಿ

ಆಚರಿಸಿಕೊಂಡು ಬಂದಿರುವಂತಹ ಆಚರಣೆಗಳನ್ನು, ಮೌಲ್ಯಾಧಾರಿತ ಬದುಕನ್ನು ತೊರೆಯಲಾಗುವುದಿಲ್ಲ ಎಂಬುದನ್ನು ಗಮನಿಸಲಾಗಿದೆ.

ವಸುಧೇಂದ್ರ ಅವರ 'ಕೆಂಧೂಳ' ವ್ಯವಸ್ಥಿತ ಗಣಿಗಾರಿಕೆ, ಇದು ಪ್ರಗತಿಯ ದ್ಯೋತಕವಾಗಿದ್ದರೂ, ರಾಜಕೀಯತೆಯ ಮತ್ತೊಂದು ಅನಾವರಣ. 'ಗಣಿಗಾರಿಕೆ'ಯು ಪ್ರಗತಿಪರ ರಾಷ್ಟ್ರಗಳು ಆರ್ಥಿಕವಾಗಿ ಬಲಾಢ್ಯತೆಯನ್ನು ಹೊಂದಲು ನಡೆಸುವಂತಹ ವ್ಯವಹಾರ, ನಿಸರ್ಗದ ಬಗೆಗೆ ಯೋಚನೆಯೂ ಇರದೆ 'ಗಳಿಕೆ'ಯ, ಲಾಭಕೋರತನದ ಬೆನ್ನತ್ತಿ, ದುಡಿಯಲು ಹೊರಟಿರುವ ವ್ಯವಹಾರ, ಗಣಿಗಳಿಂದ ಗಣಿಯ ಧಣಿಗಳಾಗುವುದು, ಸಾಮಾನ್ಯ ಜನರ ಸಂಕಷ್ಟಗಳ ಬಗೆಗೆ ಪರಿವೇ ಇಲ್ಲದೆ ನಡೆಯುವುದು, ಆರ್ಥಿಕ ಅಭಿವೃದ್ಧಿಯ ಸ್ವರೂಪ ವೃದ್ಧಿದಾಯಕ, ಲಾಭದಾಯಕತನದಿಂದ ಕೂಡಿದೆ. ಹಣದ ವ್ಯವಹಾರ ಮತ್ತು ಅವ್ಯವಹಾರದ ಸ್ವರೂಪವನ್ನು ಕಾಣಬಹುದು. ತಾನು ತನ್ನವರು ಎಂಬ ಸಾಮಾಜಿಕ ಬದುಕು, ಕಳೆದು ಕೊಂಡದ್ದು ಹಾಗೂ ಸೂಕ್ಷ್ಮ ತನವನ್ನು ಬೆಳೆಸಿಕೊಂಡದ್ದು.ಕೆಂಧೂಳ ಸಮಸ್ಯೆಯಿಂದ ಪರಿಹಾರ ಉಂಟೇ?

ನಿರಂತರವಾಗಿ ಹಣವು ಹರಿಯುವುದು ಆದರೆ ಮನಸ್ಸಿಗೆ ಧೂಳು ಮುಚ್ಚಿದರೆ ಬದುಕು ದುರಂತವೇ, ಮನಸ್ಸು ರೋಗಗ್ರಸ್ಥವಾಗಿ ಪರಿವರ್ತಿತಗೊಂಡಾಗ ಈ ರೋಗದಿಂದ ಮುಕ್ತವಾಗಲು ಸಾಧ್ಯತೆಯಿಲ್ಲ ಎಂಬ ನಿರ್ಣಯ ಧ್ವನಿಯೊಂದನ್ನು ಗುರುತಿಸಬಹುದು.

ಕೆಂಧೂಳ ವಾಸ್ತವಿಕತೆಯ ಚಿತ್ರಣ ಹುಟ್ಟು-ಸಾವು ಬದುಕಿನ ಸುತ್ತ ಹರಿವನ್ನು ಪಡೆದುಕೊಂಡಿದ್ದು, ಶಿಕ್ಷಣದ ಮಹತ್ವ ಉತ್ತಮ ಸ್ಥಾನ, ಉತ್ತಮ ಗಳಿಕೆ ಸಾಮಾಜಿಕವಾಗಿ ಪ್ರತಿಷ್ಠಿತ ಸ್ಥಾನ ಪಡೆಯುವುದು. ಹುಂಬತನ, ತುಂಟತನ ಮತ್ತು ಬಂಢ ಧೈರ್ಯದಿಂದ ಬದುಕನ್ನು ಕಳೆದುಕೊಂಡದ್ದು ತಂದೆ-ತಾಯಿಯರನ್ನು ಅನಾಥರನಾಗಿಸಿದ್ದು. ಹೆಣ್ಣು ಮುಕ್ತವಾಗಿ ಗಂಡಿನ ಆಯ್ಕೆಯ ಕಾರ್ಯಭಾವ ನಿರ್ಲಿಪ್ತವಾಗಿ ವ್ಯಕ್ತಪಡಿಸುವುದು. ಇಲ್ಲಿ ಪೂರ್ವೋತ್ತರ ಚಿಂತನೆಗಳು ಮೂಲವಾಗಿದೆ. ಜಾತಕ ಭವಿಷ್ಯ ಭವಿಷ್ಯತ್ ಚಿಂತನೆ ಎಷ್ಟರ ಮಟ್ಟಿಗೆ ಸರಿಯಾದುದು? ಮತ್ತು ಸೂಕ್ತವಾದುದು? ನಂಬಿಕೆಯ ಆಧಾರ ಮತ್ತು ಮಾನಸಿಕ ಸ್ಥಿತಿಗಳ ಸುಲಗ್ನದ ಕ್ರಿಯೆಯು ಬದುಕಿನೊಂದಿಗೆ ಬೆಸೆದುಕೊಂಡಿದೆ, ಎಷ್ಟೇ ಹೊಸ ತತ್ತ್ವಗಳು ರೂಪುಗೊಂಡಿದ್ದರೂ ಅನುಸರಿಸುತ್ತಿದ್ದರೂ ಹಳೆಯ ಮೌಲ್ಯ ನಂಬಿಕೆಗಳು ಶಕ್ತಿಯುತವಾಗಿರುತ್ತೆ ಎಂಬ ಧ್ವನಿಯನ್ನು ಗುರುತಿಸುತ್ತೇವೆ. ಹಾಗಾದರೆ ಪ್ರಗತಿ 'ಪರ' ಚಿಂತನೆಗಳು ಈ ನಂಬಿಕೆಗಳ ನೆಲೆಯಲ್ಲಿ ಅಸ್ತಿತ್ವವನ್ನು ಕಳೆದುಕೊಂಡಂತೆಯೇ ಅಲ್ಲವೇ! ಪ್ರಗತಿ ಎಂಬುವುದು ಹೊಸ ಜಗತ್ತಿನ ವಸ್ತುನಿಷ್ಟತೆಯ ನೆಲೆಯು ಇಲ್ಲಿ ಪ್ರಮುಖವಾಗಿದೆ.

ನೇಮಿಚಂದ್ರ ಅವರ 'ನೆನಪುಗಳು ನೋಯಲಅಲ್ಲ' ಕಥೆಯಲ್ಲಿ ಮುಂದುವರೆದ ನಾಗರೀಕತೆ, ಸಂಸ್ಕೃತೀಕರಣದಲ್ಲಿ ಯಶಸ್ಸು ಯಾವುದು? ಪೀಳಿಗೆಯಿಂದ ಪೀಳಿಗೆಗೆ ಮೌಲ್ಯ ಬದಲಾಗಬಹುದೇ? ಮೌಲ್ಯಗಳು ಸರ್ವಕಾಲೀಕವಾದುದು, ಭಾವ-ಹೃದಯ-ಅಂತರಂಗ-ಅಂತರಾಳದ ಸ್ಪಂದನೆಗಳು ಸಂದರ್ಭ ಸನ್ನಿವೇಶಗಳು ಮುಖ್ಯವಾಗುವುದು.

ಪಾಶ್ಚಾತೀಕರಣದ ಪ್ರಭಾವವಿದ್ದರೂ ಭಾರತೀಯತೆಯ ಮನೋಭಾವಗಳು ದೂರ ಸಾಗುವುದೇ ಅಸಾಧ್ಯ. ಶಿಕ್ಷಣದ ಪ್ರಭಾವದಿಂದ ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಸಮಾನತೆ ವೈಚಾರಿಕ ಮನೋಭಾವ ಬೆಳೆಸಿಕೊಂಡದ್ದು ವಾಸ್ತವತೆಯಿಂದ ದೂರ ಸರಿದು ಯಾವುದೋ ಕಲ್ಪನೆಯ, ಭ್ರಮೆಯ, ಕನಸಿನ ಜಗತ್ತಿನತ್ತ ಪ್ರಯಾಣ ಮಾಡುವ ಮಾನಸಿಕ ಸ್ಥಿತಿ, ಹಣ, ದೈಹಿಕ ಹಸಿವು ಜೀವನಕ್ಕೆ ಆಧಾರವೇ? ಭಾರತೀಯ ಪರಂಪರೆ, ಪತಿ-ಪತ್ನಿಯ ಸಂಬಂಧ ಕರ್ತವ್ಯಗಳ ಬಗ್ಗೆ, ತನ್ನ ಹಿಂದಿನ ತಲೆಮಾರಿನ ಪೀಳಿಗೆಯ ಅಮ್ಮ-ಅತ್ತೆಯರ ಜೀವನ ಶೈಲಿಯನ್ನು ಗಮನಿಸಿದ್ದರೂ, ಆಧುನಿಕತೆಯ ಒತ್ತಡದಲ್ಲಿ 'ಗಳಿಕೆ', 'ಸುಖ' ಎರಡೇ ಜೀವನಕ್ಕೆ ಮುಖ್ಯ ಎಂಬ ನಿಲುವುಳ್ಳ ಕಥೆ.

ಈ ಕಥೆಯಲ್ಲಿ ಮೂರು ಪಾತ್ರಗಳು ಸಣ್ಣ ಕುಟುಂಬ ಗಂಡ-ಹೆಂಡತಿ ಮತ್ತು ಮಗಳು. ಸುಶಿಕ್ಷಿತವಾದ ಉತ್ತಮ ಉನ್ನತ ಶ್ರೇಣಿಯಲ್ಲಿರುವರು. ಕಥಾ ನಾಯಕಿ 'ಸಾವಿತ್ರಿ' ಗಂಡ 'ಗೋಪಿ' ಮತ್ತು ಮಗಳು ಶಾಮೋನಿ. ಸಾವಿತ್ರಿಯ ಬದುಕಿಗೆ ಸ್ನೇಹಿತನಾಗಿ ಬಂದದ್ದು ರವಿ, ಸುತ್ತಾಡಿದ್ದು ಕನಸು ಕಟ್ಟಿಕೊಂಡಿದ್ದರೂ ವಿವಾಹವಾಗಿದ್ದು, ಗೋಪಿ ಆತ್ಮದ ಸಂಗಾತದ ಸಹೋದ್ಯೋಗಿ 'ರವಿ'ಯೊಂದಿಗೆ ಭಾವನೆಗಳನ್ನು ಹಂಚಿಕೊಂಡಿರುವುದು, ಭಾರತೀಯ ಪರಂಪರೆಯಂತೆ ಹಿರಿಯರ ಮಾತಿಗೆ ತಲೆಬಾಗಿ ವಿವಾಹ ಮಾಡಿಕೊಂಡದ್ದು ಹೀಗೆ ಹೆಚ್ಚು ಸ್ವಾತಂತ್ರ್ಯ ಪಡೆಯುವುದಕ್ಕೆ ಕಾರಣ ಪಾಶ್ಚಾತ್ಯ ಶಿಕ್ಷಣವೇ!

ಆರ್ಥಿಕ ಸ್ವಾತಂತ್ರ್ಯವೆ?! ಭಾವನೆಗಳ ಚೆಲ್ಲಾಟಗಳೇ? ಹೇಗೆ? ಇನ್ನು ಡೈರಿ ದಿನಚರಿ ಬರೆಯುವುದು ಒಂದು ಹವ್ಯಾಸ ಹಾಗೆ ಬರೆದದ್ದು, ಗತಕಾಲದ ಅನುಭವಗಳು ಬರೆದದ್ದು ಮರೆತದ್ದೂ ಆಗಿತ್ತು. ಆದರೆ ಅದು ಭ್ರಮೆ ಎಂದೂ ಅನಿಸಿದ್ದಾಯಿತು. ಮಗಳು ಶಾಮೋನಿಗೆ ಗತಕಾಲದ ಬದುಕಿನ ರಹಸ್ಯಗಳು ತಿಳಿಸಿದ್ದು ತನ್ನ ತಾಯಿಯ ಘನತೆಗೆ ಧಕ್ಕೆ ಬಂದದ್ದು ಅನೇಕ ತರಹದ ಆಲೋಚನೆಗಳು. ಸ್ವತಂತ್ರ ಪ್ರವೃತ್ತಿಯ ಹೆಣ್ಣು ಪುರುಷನಂತೆ ಸಮಾನವಾಗಿ, ಆರ್ಥಿಕವಾಗಿ ನಿಂತವಳು, ಹೆಣ್ಣು-ಗಂಡು ಎಂಬ ಭೇದ ಭಾವವಿಲ್ಲದೆ ಜೊತೆಯಲ್ಲಿ ನಡೆದವಳು. ಸರಿತಪ್ಪುಗಳ ಆಲೋಚನೆ ವಿವೇಚನೆಗಳು ಇಲ್ಲಿ ಇಲ್ಲ. ರವಿಯನ್ನು ಆತ್ಮಸಂಗಾತನಂತೆ ನಡೆಸಿಕೊಂಡಿದ್ದರೂ ಕೊನೆಯವರೆಗೂ ಬದುಕಿನ ಹಾದಿಯಲ್ಲಿ ಜೊತೆಯಾಗಿ ಬಾಳಲು ಸಾಧ್ಯವಾಗಲಿಲ್ಲ. ಪಾತ್ರದ ಬೆಳವಣಿಗೆಗಾಗಿ ಇಲ್ಲಿ ಎರಡು ಸಂದರ್ಭಗಳನ್ನು ನೆನಪು ಮಾಡಿಕೊಳ್ಳಬಹುದು. ಪಾಶ್ಚಾತ್ಯ ದೇಶಗಳ ಪ್ರವಾಸ ಹೋದಾಗ ಮಂಜಿನ ಉಂಡೆಯಿಂದ ಉರುಳಿ ಬಿದ್ದದ್ದು, ಅವಳನ್ನು ಸಾವಿನಿಂದ ಪಾರು ಮಾಡಿದ್ದು ರವಿ, ಗಂಡ ಸಹಾಯಕ್ಕಾಗಿ ಯೋಚನೆ ಮಾಡುತ್ತಿದ್ದು ಇಲ್ಲಿ ಗಂಡ ಮಾಡಬೇಕಾದ ಕಾರ್ಯವನ್ನು, ಕೆಲಸವನ್ನು ಪ್ರಿಯಕರ ಅಥವಾ ಸ್ನೇಹಿತ ಮಾಡಿದ್ದು ಸಂತೋಷವಾಗದಂತೆ ಗಂಡನ ಬಗ್ಗೆ ಅಲಕ್ಷ ಭಾವವುಂಟಾಯಿತು. ಇನ್ನೂ ಜೊತೆಯಲ್ಲಿ ಬಾಳುವೆ ನಡೆಸಲು ಸಾಧ್ಯವಿಲ್ಲದೆ ಮಗಳೊಂದಿಗೆ ಬದುಕು ಮಾಡುತ್ತಿದ್ದದ್ದು, ಅವಳ ಕನಸಿನಲ್ಲಿ ರವಿ ಸದಾ ಇದ್ದದ್ದು, ಇಲ್ಲೂ ಕೂಡ ಸೋಲನ್ನು ಪಡೆಯುವುದು.

ಪರರ ಹೆಣ್ಣು ಎಂಬ ಮೌಲ್ಯಕ್ಕೆ ಬದ್ಧನಾಗಿದ್ದು ವಿವಾಹಕ್ಕೆ ಅಮಂತ್ರಣ ನೀಡುವುದು, ಮಾನವೀಯತೆಯ ದೃಷ್ಟಿಯಿಂದ ಸಾವಿನ ಅಂಚಿನಿಂದ ಬದುಕಿಸಿದ್ದು ಇಲ್ಲಿ ಮೌಲ್ಯಗಳು ವಿಶೇಷ ಸ್ಥಾನ ಪಡೆಯುವುದು.

ಗೋಪಿಗೆ ಅನಾರೋಗ್ಯ-ಕ್ಯಾನ್ಸರ್ ಆದಾಗ ಗಂಡನಿಗೆ ಮಾಡಬೇಕಾದ ಸೇವೆಯೇ ಭಾರತೀಯ ಪರಂಪರೆಯ ಪ್ರಕಾರ ಕರ್ತವ್ಯ ಎಂದು ನಿಭಾಯಿಸಿದ್ದೂ ಆಯಿತು. ತನ್ನ ಅಂತರಂಗದ ಭಾವಗಳು ಡೈರಿಯಲ್ಲಿ ನಿರೂಪಿತಗೊಂಡದ್ದು ಒಂದಾದರೆ, ಲೇಖಕಿಯು ಸಾವಿತ್ರಿಯ ಪಾತ್ರದ ಮೂಲಕ ಒಂದು ತಾತ್ತ್ವಿಕ ಹೇಳಿಕೆಯನ್ನು ಹೇಳಿಸುವರು "ನೆನಪುಗಳು ಮಾಸಬಹುದು, ಆದರೆ ಸಾಯುವುದಿಲ್ಲ"[೧೩] ಬೇಕು ಎಂದಾಗ ಅಥವಾ ಪ್ರೇರಣೆಗಳಾದ ನೆನಪುಗಳು ಮರುಕಳಿಸುವುದು ಪ್ರಕೃತಿಯ ಧರ್ಮ. "ನಮ್ಮ ಸ್ವಗತಗಳ ನಡುವೆ ನಾವು ಕಳೆದು ಹೋದೆವು, ಸಂವಾದಕ್ಕೆ ಅವಕಾಶ ಕೊಡದೆ, ಮುಂದೆ ಬದುಕು ಪೂರ ಸ್ವಗತಗಳೊಡನೆಯೇ ಕಳೆಯಲ್ಲಿದ್ದೆವು, ಸಂಭಾಷಣೆಯನ್ನು ಮರೆತು?"[೧೪] ಸಂಬಂಧಗಳು ಕತ್ತರಿಸಿಕೊಳ್ಳುವ ಕೊಳ್ಳುತ್ತಿರುವ ವಿಚಿತ್ರ ತತ್ವ. ಇದು ಆಧುನಿಕ ಜೀವನದ ಶೈಲಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಕಾರಣ ಸಮಯ ಅನ್ನುವುದೇ ಇಲ್ಲ, ದುಡಿಮೆ-ಶ್ರಮ ವ್ಯಯ ಮಾಡುವುದರಲ್ಲಿ ಭಾವನೆಗಳನ್ನು ಅಭಿವ್ಯಕ್ತಿ ಪಡಿಸಲು ಅವಕಾಶ ದೊರೆಯದೆ ಇರುವುದು ಅವುಗಳು ಅರ್ಥ ಅನರ್ಥಗಳಿಗೆ ಅವಕಾಶವಾಗುವುದು ಸಹಜವೇ. ಹೆಣ್ಣು ಕೇಂದ್ರಿತ ಈ ಕಥೆಯಲ್ಲಿ ಭಾವನೆಗಳ ತಾಕಲಾಟ ಬದುಕಿನ ಅನೇಕ ಪ್ರಶ್ನೆಗಳು ಉತ್ತರಗಳ ಹುಡುಕಾಟ ವಾಸ್ತವ ಭ್ರಮೆ ಕಲ್ಪನೆಗಳ ನಡುವೆ ಸಂಘರ್ಷ, ಬುದ್ಧಿ-ಹೃದಯ ಭಾವಗಳ ನಡುವೆ ಅಂತರ ಸಾಮಾಜಿಕ ಮೌಲ್ಯ ಮತ್ತು ಪ್ರತಿಷ್ಠೆಗಳ ನಡುವೆ ಕಂದಕ, ಆದರೆ ಮುಂದಿನ ಪೀಳಿಗೆ ಈ ಎಲ್ಲಾ ಸಮಸ್ಯೆಗಳನ್ನು ಹೇಗೆ ನಿಭಾಯಿಸಬಹುದು. ಅಲ್ಲೂ ಕೂಡ ತರ್ಕ ಮತ್ತು ತನ್ನದೇ ಸರಿ ಎಂಬ ಮೂಗು ನೇರದ ಸ್ಥಿತಿ ಅಥವಾ ಮನೋಭಾವ.

ಈ ಕಥೆಯ ತಂತ್ರ ಎಲ್ಲಾ ಕಥೆಗಳಿಗಿಂತ ಭಿನ್ನವಾಗಿದೆ. ಮಗಳು-ತಾಯಿ ಸ್ವಗತ ರೂಪದಲ್ಲಿ ತಮ್ಮ ಚಿಂತನೆಗಳನ್ನು ವಿಸ್ತರಿಸುತ್ತ ಹೋಗುವುದು. ಸರಿ ತಪ್ಪುಗಳ ಬಗ್ಗೆ ಸುದೀರ್ಘ ಚರ್ಚೆ, ನಿರ್ಣಯದ ಭಾಗ, ಸಂವಾದ ತರ್ಕ-ಬುದ್ಧಿಯ

ಕಸರತ್ತು ಅದರಲ್ಲೂ ವಾಸ್ತವ, ಕಲ್ಪನೆ, ಭ್ರಮೆಗಳ, ಬಗೆಗಿನ ಚರ್ಚೆ ಅದರಲ್ಲಿ ಬದುಕಿನ ಅನೇಕ ಸಮಸ್ಯೆಗಳು ಉಂಟಾದ ಬಗೆಗೆ, ಆ ಸಂದರ್ಭಗಳಲ್ಲಿ ತೆಗೆದು ಕೊಂಡ ನಿರ್ಣಯಗಳು ಅವು ಏನೇ ಇದ್ದರೂ ಕಲ್ಪನೆಯ ಜಗತ್ತು ಮಾತ್ರ, ವಿಚಾರಗಳು ಹುಟ್ಟುವುವು ಬೆಳೆಯುವುವು ಹಾಗೆಯೇ ಕಳೆದು ಹೋಗುವುವು ಮತ್ತು 'ವಾಸ್ತವತೆ' - 'ಮೌಲ್ಯಗಳ' ಬದುಕು ಸುಂದರ, ಬದುಕಿನಲ್ಲಿ ಯಾವುದೇ ರೀತಿಯಲ್ಲೂ ಏರಿಳಿತಗಳಿಲ್ಲ ಎಂಬ ನಿರ್ಣಯ ಕಂಡುಬರುವುದು. ಬದುಕಿನ ಅನೇಕ ಆಯಾಮಗಳ ಚಿಂತನೆಯ ಅಭಿವ್ಯಕ್ತಿಯೇ ಈ ಕಥೆ.

ಪರಂಪರೆಯ ಸಾಮಾಜಿಕ ಮೌಲ್ಯಗಳು ಕಾಲದಿಂದ ಕಾಲಕ್ಕೆ ಬದಲಾಗಲು ಸಾಧ್ಯವೇ! ಮೌಲ್ಯಗಳಿಗೆ ಮೌಲಿಕ ಸ್ಥಾನ ಮಾನಗಳು ಇದ್ದೇ ಇರುತ್ತದೆ. ರೂಢಿಗತ ಸಂಪ್ರದಾಯ ಆಚರಣೆಗಳು, ಸಂಸ್ಕಾರಗಳು ಬೆಸೆದಕೊಂಡು ಸಂಸ್ಕೃತಿಯನ್ನಾಗಿಸಿ, ಮುಂದುವರೆದಂತೆ ಒಂದು ಪರಿಸರ ಮತ್ತು ಪರಿಕಲ್ಪನೆಗೆಳಾಗಿ ಸ್ಥಾಯಿಯಾಗುತ್ತದೆ. ಹೀಗೆ ಮೌಲ್ಯ ಪ್ರಧಾನ ಜಗತ್ತು ನಿಮಾರ್ಣಗೊಂಡು ಒಂದು ಆರೋಗ್ಯಕರ ಸಮಾಜವನ್ನು ಕಟ್ಟುವಲ್ಲಿ ಪ್ರಮುಖಸ್ಥಾನ ಪಡೆದಿರುತ್ತದೆ. ಒಟ್ಟಿನಲ್ಲಿ ಒಂದು ಸಮಾಜದ ನಿರ್ಮಾಣಕ್ಕೆ ಮೌಲಿಕ ಜೀವನ ಪದ್ಧತಿ, ರೂಢಿಗತ ನಿಯಮಗಳು, ನಂಬಿಕೆಗಳು ಆಚಾರ-ವಿಚಾರಗಳು ಪ್ರಮುಖವಾಗಿರುತ್ತವೆ. ಇವುಗಳೇ ಜೀವನದ ಧಾತುಗಳು ಮತ್ತು ಬದುಕಿಗೆ ಪ್ರೇರಣೆಯಾಗಿರುವಂತಹವು.

**ಅಡಿಟಿಪ್ಪಣಿಗಳು**

೧. ಡಿ.ವಿ.ಜಿ. : ಸಂಸ್ಕೃತಿ, ಕಾವ್ಯಾಲಯ ಪ್ರಕಾಶಕರು, ೧೯೯೬

**೨.** ದೇಜಗೌ : ಕನ್ನಡ ಸಂಸ್ಕೃತಿ-ಬೆಂಗಳೂರು ಪ್ರಸಾರಂಗ ಮತ್ತು ಮುದ್ರಣಾಲಯ-೨೦೦೧-ಪುಟ-೧

**೩.** ದೇಜಗೌ : ಕನ್ನಡ ಸಂಸ್ಕೃತಿ-ಬೆಂಗಳೂರು ಪ್ರಸಾರಂಗ ಮತ್ತು ಮುದ್ರಣಾಲಯ-ಪುಟ-೧-೨೦೦೧

೪. ಅಂಚೆ ತೆರಪು ದೂರಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಸಂಸ್ಕೃತಿ, ಪುಟ-೨

೫. ಅಂಚೆ ತೆರಪು ದೂರಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಸಂಸ್ಕೃತಿ, ಪುಟ-೨

೬. ಅಂಚೆ ತೆರಪು ದೂರಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಸಂಸ್ಕೃತಿ, ಪುಟ-೩

೭. ಅಂಚೆ ತೆರಪು ದೂರಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಸಂಸ್ಕೃತಿ, ಪುಟ-೩

೮. ಓ.ಎಲ್.ನಾಗಭೂಷಣ್ : ವಿಮರ್ಶೆಯ ಪರಿಭಾಷೆ, ಅಭಿನವ ಪ್ರಕಾಶನ, ಪುಟ-೩೬೦

೯. ಅಮರೇಶ ನುಗಡೋಣಿ : ಒಡಲ ಹಂಗು, ಅಂಕಿತ ಪುಸ್ತಕ, ೨೦೧೪, ಪುಟ-೧೨೫

೧೦. ಬಾನು ಮುಷ್ತಾಕ : ಹಸಿನಾ ಮತ್ತು ಇತರ ಕಥೆಗಳು, ಅಭಿರುಚಿ ಪ್ರಕಾಶನ, ೨೦೧೩, ಪುಟ-೪೫೧

೧೧. ನೇಮಿಚಂದ್ರ : ಇಲ್ಲಿವರೆಗಿನ ನೇಮಿಚಂದ್ರ ಕತೆಗಳು : ಅಂಕಿತ ಪುಸ್ತಕ, ೨೦೧೨, ಪುಟ-೨೯೧

೧೨. ನೇಮಿಚಂದ್ರ : ಇಲ್ಲಿವರೆಗಿನ ನೇಮಿಚಂದ್ರ ಕತೆಗಳು : ಅಂಕಿತ ಪುಸ್ತಕ, ೨೦೧೨, ಪುಟ-೧೭೦

೧೩. ನೇಮಿಚಂದ್ರ : ಇಲ್ಲಿವರೆಗಿನ ನೇಮಿಚಂದ್ರ ಕತೆಗಳು : ಅಂಕಿತ ಪುಸ್ತಕ, ೨೦೧೨, ಪುಟ-೧೭೪

೧೪. ನೇಮಿಚಂದ್ರ : ಇಲ್ಲಿವರೆಗಿನ ನೇಮಿಚಂದ್ರ ಕತೆಗಳು : ಅಂಕಿತ ಪುಸ್ತಕ, ೨೦೧೨, ಪುಟ-೧೦೨

೧೫. ಡಾ. ನಾ. ಡಿಸೋಜ : ಡಾ. ನಾ. ಡಿಸೋಜ ಅವರ ಸಮಗ್ರ ಕಥೆಗಳು,ಸಂಪುಟ-೩,ಸಾಗರ ಪ್ರಕಾಶನ,೨೦೧೨ಪುಟ-೫೫೪

೧೬. ಮೊಗಳ್ಳಿ ಗಣೇಶ್ : ಭೂಮಿ, ಪ್ರಿಸಮ್ ಬುಕ್ಸ್, ೨೦೦೧, ಪುಟ-೮೧

೧೭. ಮೊಗಳ್ಳಿ ಗಣೇಶ್ : ಭೂಮಿ, ಪ್ರಿಸಮ್ ಬುಕ್ಸ್, ೨೦೦೧, ಪುಟ-೮೧